# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY








ಸಂಪುಟ:01 • ಸಂಚಿಕೆ:210 • ನೋಂದಣಿ ನಂ.:KARKAN27911 • ವಿಜಯನಗರ • 14.01.2024 • ಭಾನುವಾರ • ಪುಟ:04 • ಬೆಲೆ:2
Volume:01 • Issue:210 • Reg.No:KARKAN27911 • VIJAYANAGARA • 14.01.2024 • Sunday • Page:04 • Rs:2


**ಮೈಕ್ರೋ ನ್ಯೂಸ್**

## ಜ.16ರಂದು ಶ್ರೀ ಕೊಟ್ಟೂರುಸ್ವಾಮಿ ಮಠದಲ್ಲಿ ಮಾಸಿಕ ಶಿವಾನುಭವ ಸಂಪದ

**ಹಂಪಿ ಟೈಮ್ಸ್ ಹೊಸಪೇಟೆ**
ನಗರದ ಶ್ರೀ ಕೊಟ್ಟೂರುಸ್ವಾಮಿ ಮಠದಲ್ಲಿ ಜ.16 ರಂದು ಸಂಜೆ 7 ಗಂಟೆಗೆ



1159ನೇ ಮಾಶಿಕ ಶಿವಾನುಭವ ಸಂಪದ ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳ ಸಾನ್ನಿಧ್ಯದಲ್ಲಿ ಜರುಗಲಿದೆ ಎಂದು ಶ್ರೀ ಕೊಟ್ಟೂರುಸ್ವಾಮಿ ಸಂಸ್ಥಾನಮಠ ತಿಳಿಸಿದೆ.

ಗರಗನಾಗಲಾಪುರದ ಎಂ.ಆರ್. ಚಿನ್ನಾಪುರಯ್ಯಸ್ವಾಮಿ ಉಪನ್ಯಾಸ ನೀಡಲಿದ್ದಾರೆ. ಗೌರವಾನ್ವಿತ ಅತಿಥಿಗಳಾಗಿ ಆರ್ವೀ ಮೈನ್ಸ್‌ನ ಆರ್.ಪಿ.ಪ್ರಕಾಶ, ಸಮಾಜದ ಮುಖಂಡರಾದ ಹೆಚ್. ಎನ್.ಎಫ್, ಮೊಹ್ಮದ್ ಇಮಾಮ್ ನಿಯಾಜಿ, ಜಿ.ಭರಮನಗೌಡ್ರು, ಗುಜ್ಜಲ ಚಂದ್ರಶೇಖರ, ಕಟಿಗಿ ಜಂಬಯ್ಯನಾಯಕ ಉಪಸ್ಥಿತರಿರಲಿದ್ದಾರೆ. ಹೆಚ್. ಎಂ.ಚೆನ್ನಬಸಯ್ಯ ಮತ್ತು ಕಲಾಬಳಗ ಸಂಗೀತ ಸೇವೆ ನೀಡಲಿದೆ. ಧಾರ್ಮಿಕ ಕಾರ್ಯಕ್ರಮದಲ್ಲಿ ಸರ್ವ ಸಮಾಜದ ಭಕ್ತರು ಮಾಶಿಕ ಶಿವಾನುಭವ ಸಂಪದದಲ್ಲಿ ಪಾಲ್ಗೊಂಡು ಶ್ರೀಗಳ ಆಶೀರ್ವಚನ ಪಡೆಯಬೇಕೆಂದು ಶ್ರೀಕೊಟ್ಟೂರುಸ್ವಾಮಿ ಮಠ ಕೋರಿದೆ.

# ಹಂಪಿ ಉತ್ಸವ-2024 ಲಾಂಛನ ಸಿಎಂ ಸಿದ್ದರಾಮಯ್ಯ ಬಿಡುಗಡೆ



**ಹಂಪಿ ಟೈಮ್ಸ್ ಹೊಸಪೇಟೆ:**
ಫೆಬ್ರವರಿ 2 ರಿಂದ ಮೂರು ದಿನಗಳ ಕಾಲ ನಡೆಯಲಿರುವ ವಿಶ್ವ ವಿಖ್ಯಾತ ಹಂಪಿ ಉತ್ಸವದ ಲಾಂಛನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಿಡುಗಡೆ ಮಾಡಿದರು. ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹಮದ್ ಖಾನ್, ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್, ಶಾಸಕ ರಾಘವೇಂದ್ರ ಹಿಟ್ನಾಳ್, ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್, ನಟ ಸಾಧು ಕೋಕಿಲ, ನಿರ್ದೇಶಕಿ ಕವಿತಾ ಲಂಕೇಶ್ ಉಪಸ್ಥಿತರಿದ್ದರು.
ಲಾಂಛನ ಬಿಡುಗಡೆಗೂ ಮುನ್ನ ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಖಾನ್ ಜಿಲ್ಲಾಧಿಕಾರಿ ದಿವಾಕರ್ ಅವರೊಂದಿಗೆ ಹಂಪಿ ಉತ್ಸವದ ಪೂರ್ವ ಸಿದ್ಧತೆಗಳ ಬಗ್ಗೆ ಚರ್ಚಿಸಿ, ಮಾಹಿತಿ ಪಡೆದರು. ಹಂಪಿ ಉತ್ಸವವನ್ನು ಜನೋತ್ಸವನ್ನಾಗಿ ಆಚರಿಸಬೇಕು ಎಂದು ತಿಳಿಸಿದರು.

**ಬನ್ನಿ ಹೊಸ ಸಂ.....ಕ್ರಮಣದತ್ತ ಹೆಜ್ಜೆ ಹಾಕೋಣ**
– ವೀಣಾ ಎಚ್.ಪಾಟೀಲ್, ಪುಟ 2 ರಲ್ಲಿ

ಮೈಮೇಲೆ ಹರಿದ ಬಟ್ಟೆ
ಇದ್ದರೂ ಚಿಂತೆಯಿಲ್ಲ,
ಕೈಯಲ್ಲೊಂದು
ಕನ್ನಡ ದಿನಪತ್ರಿಕೆ ಇರಲಿ
। ಡಿ.ವಿ.ಜಿ.

**ಮಕ್ಕಳನ್ನು ಅವರಿದ್ದಂತೆ ಒಪ್ಪಿಕೊಳ್ಳಿ !**
– ಜಿ. ಶಿವಕುಮಾರ್ ಸೋಗಿ, ಪುಟ 2 ರಲ್ಲಿ

# ಡಿಎಂಎಫ್ ಅನುದಾನ ಬಂದಿದೆ ಕಾಮಗಾರಿ ಶೀಘ್ರ ಪೂರ್ಣಗೊಳಿಸಿ

### ಶಾಸಕಡಾ.ಎನ್.ಟಿ.ಶ್ರೀನಿವಾಸ್ ಅಧಿಕಾರಿಗಳಿಗೆಸೂಚನೆ



**ಹಂಪಿ ಟೈಮ್ಸ್ ಕೂಡ್ಲಿಗಿ**
ಕಲ್ಯಾಣ ಕರ್ನಾಟಕ ಅಭಿವೃದ್ಧಿ ಯೋಜನೆ, ಜಿಲ್ಲಾ ಖನಿಜ ನಿಧಿ ಸೇರಿದಂತೆ ವಿವಿಧ ಯೋಜನೆಗಳಿಗೆ ಮಂಜೂರಾಗಿರುವ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ತಾಲೂಕು ಮಟ್ಟದ ಅಧಿಕಾರಿಗಳ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು. ಹಿಂದುಳಿದ ತಾಲೂಕಿನಲ್ಲಿ ಅನೇಕ ಕಡೆ ಶಾಲೆ ಕೊಠಡಿಗಳು ದುಸ್ಥಿತಿಯಲ್ಲಿವೆ. ಈಗಾಗಲೇ ಸಂಭಂದಿಸಿದ ಅಧಿಕಾರಿಗಳ ಮೂಲಕ ಪಟ್ಟಿ ಮಾಡಿ ರಿಪೇರಿ ಕಾರ್ಯಕ್ಕೆ ಅವಶ್ಯ ಅನುದಾನ ನೀಡಿದೆ. ಉಳಿದಂತೆ ಕ್ಷೇತ್ರದ ಕೆಲವು ಗ್ರಾಮಗಳ ರಸ್ತೆಗಳು ಕೂಡ ಹಾಳಾಗಿವೆ. ಅದನ್ನು ಸರಿಪಡಿಸಲು ಅನುದಾನ ನೀಡಿದ್ದು, ಗುಣಮಟ್ಟದ ಕಾಮಾಗಾರಿ ನಿರ್ವಹಿಸಲು ಈಗಾಗಲೇ ಅಧಿಕಾರಿಗಳಿಗೆ ಸೂಚನೆ ನೀಡಿದ್ದು, ಫೆಬ್ರವರಿ ತಿಂಗಳಲ್ಲಿ ಕಾಮಾಗರಿ ಮುಗಿಸಲು ಸೂಚನೆ ನೀಡಿದರು.

ಉಳಿದಂತೆ ಪಟ್ಟಣದಲ್ಲಿ ತಾಯಿ ಮತ್ತು ಮಗುವಿನ ಆರೈಕೆಗೆ ಸುಸಜ್ಜಿತ ಆಸ್ಪತ್ರೆ ನಿರ್ಮಿಸಲು ಯೋಜನೆ ರೂಪಿಸಿದ್ದು, ಪಟ್ಟಣದ ಹಳೆ ಆಸ್ಪತ್ರೆ ನಿವೇಶನ ಸೂಕ್ತವಾಗಿದ್ದು, ಯೋಜನೆ ಸಹ ರೂಪಿಸಲಾಗಿದೆ. ಸುಮಾರು 25 ಕೋಟಿ ಅನುದಾನ ಅವಶ್ಯವಿರುವ ಕಾರಣ, ಸರ್ಕಾರಕ್ಕೆ ಈ ಕುರಿತು ಅನುದಾನಕ್ಕೆ ಬೇಡಿಕೆ ಇಟ್ಟಿದ್ದು. ಅನುದಾನ ನೀಡುವ ಭರವಸೆಯನ್ನು ಸಂಬಂಧಿಸಿದ ಸಚಿವರು ತಿಳಿಸಿದ್ದಾರೆ ಎಂದು ತಿಳಿಸಿದರು. ಮುಂದಿನ ಬಜೆಟ್ ನಲ್ಲಿ ಕ್ಷೇತ್ರದ ವಿವಿಧ ಯೋಜನೆಗಳಿಗೆ ಅನುದಾನದ ಬೇಡಿಕೆ ಇಟ್ಟಿದ್ದು, ಸರ್ಕಾರ ಇದಕ್ಕೆ ಸಮ್ಮತಿ ಸೂಚಿಸಿದ್ದು, ಅಧಿಕಾರಿಗಳು ಸಹ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಸಹಕಾರಿಸಿ ಮಾದರಿ ಕ್ಷೇತ್ರವನ್ನಾಗಿಸಲು ಕೈ ಜೋಡಿಸಬೇಕು ಎಂದು ಮನವಿ ಮಾಡಿದರು. ಇದೇ ಸಂಧರ್ಭದಲ್ಲಿ ಕೆಆರ್ ಐಡಿಎಲ್, ಲೋಕೋಪಯೋಗಿ, ಜಿಪಂ ಸೇರಿದಂತೆ ತಾಲೂಕು ಆರೋಗ್ಯಾಧಿಕಾರಿಗಳ ಅಧಿಕಾರಿಗಳೊಡನೆ ಸಭೆಯಲ್ಲಿ ಚರ್ಚೆ ನಡೆಸಿದರು. ಟಿಎಚ್ಒ ಎಸ್.ಪಿ.ಪ್ರದೀಪ್ ಕುಮಾರ್, ಲೋಕೋಪಯೋಗಿ ಇಲಾಖೆ ಎಇಇ ಡಿ.ವೆಂಕಟರಮಣ, ಜಿಪಂ ಇಲಾಖೆ ಎಇಇ ಮಲ್ಲಿಕಾರ್ಜುನ, ಪಪಂ ಮುಖ್ಯಾಧಿಕಾರಿ ಫಿರೋಜ್ ಖಾನ್ ಸೇರಿದಂತೆ ಅನೇಕ ತಾಲೂಕು ಮಟ್ಟದ ಅಧಿಕಾರಿಗಳು ಸಭೆಯಲ್ಲಿ ಭಾಗಿಯಾಗಿದ್ದರು.




ಹಂಪಿ ಟೈಮ್ಸ್ ಸಂ|ಪಾ|ದ|ಕೀ|ಯ

## ಭವಿಷ್ಯದಲ್ಲಿ ಭಕ್ತರ ಕೇಂದ್ರ ಬಿಂದು ಆಗಲಿರುವ ಶ್ರೀರಾಮನ ಅಯೋಧ್ಯೆ



ಪ್ರಸ್ತುತ ಇಡೀ ದೇಶದ ಕೇಂದ್ರ ಬಿಂದುವಾದ ಉತ್ತರ ಪ್ರದೇಶದ ಅಯೋಧ್ಯೆಯತ್ತ ಈಗ ಎಲ್ಲರ ಗಮನವಿದೆ. ಕೆಲವರಷ್ಟೇ ಇದನ್ನು ವಿರೋಧಿಸುತ್ತಿರುವುದನ್ನು ಬಿಟ್ಟರೆ ದೇಶದ ಎಲ್ಲರೂ ರಾಮಮಂದಿರ ಉದ್ಘಾಟನೆಯ ಅಮೃತ ಘಳಿಗೆಯನ್ನು ಕಾತರದಿಂದ ಕಾಯುತ್ತಿದ್ದಾರೆ. ಇದೇ 2024ರ ಜನವರಿ 22ರಂದು ರಾಮಮಂದಿರ ಲೋಕಾರ್ಪಣೆ ಆಗಲಿದೆ. ಭಾರತ ಮಾತ್ರವಲ್ಲ, ವಿಶ್ವಕ್ಕೇ ಅಯೋಧ್ಯೆಯ ಮಹತ್ವ, ರಾಮಮಂದಿರದ ಗೌರವವನ್ನು ಪ್ರಧಾನಿ ಮೋದಿ ಜಗತ್ತಿಗೇ ತಿಳಿಸಿದ್ದಾರೆ.

ಮರ್ಯಾದಾ ಪುರುಷೋತ್ತಮನ ಕೋಟಿ ಕೋಟಿ ಭಕ್ತರು, ಪ್ರವಾಸಿಗರು ಅಯೋಧ್ಯೆಯತ್ತ ಪ್ರಯಾಣ ಬೆಳೆಸಿದ್ದಾರೆ. ಜನವರಿ 22ರ ನಂತರವೂ ಇದು ನಿತ್ಯ ನಿರಂತವಾಗಿರಲಿದೆ. ಇಂತ ಒಂದು ಸುವರ್ಣ ಸಮಯ ಬರಲು ಕಾರಣವಾಗಿದ್ದು ನಿಶ್ಚಿತವಾಗಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಎಂಬುದರಲ್ಲಿ ಎರಡು ಮಾತಿಲ್ಲ. ರಾಮಜನ್ಮಭೂಮಿ ಎಂದರೆ ಅದು ಅಯೋಧ್ಯೆ. ಇಲ್ಲಿದ್ದ ರಾಮಮಂದಿರವನ್ನು ಕೆಡವಿ, ಬಾಬರಿ ಮಸೀದಿ ನಿರ್ಮಿಸಲಾಗಿತ್ತು ಎಂದು ಇತಿಹಾಸ ತಿಳಿಸುತ್ತದೆ. ಬಾಬರಿ ಮಸೀದಿ ಕೆಡವಿದ ಬಳಿಕ ರಾಮಜನ್ಮಭೂಮಿ ಪುನರ್ ನಿರ್ಮಾಣ ಈಗ ಆಗಿದೆ. ಅಯೋಧ್ಯೆಗೆ 2017ರಲ್ಲಿ ಮುಖ್ಯಮಂತ್ರಿಯಾಗಿ ಆಯ್ಕೆಯಾದ ಯೋಗಿ ಆದಿತ್ಯನಾಥ್ ಅವರು ರಾಮಜನ್ಮಭೂಮಿಗೆ ಪುನರುಜ್ಜೀವನ ನೀಡಲು ಮುಂದಾದರು. ಅಯೋಧ್ಯೆಯಲ್ಲಿ ರಾಮನ ಹೆಸರು ಮರುಕಳಿಸುವ ಜತೆಗೆ ಅಗತ್ಯ ಸೌಕರ್ಯ, ಯೋಜನೆಗಳನ್ನು ಜಾರಿಗೆ ತಂದರು. ಶ್ರೀರಾಮಮಂದಿರ ನಿರ್ಮಾಣದ ಕುರಿತು 2019ರಲ್ಲಿ ಸುಪ್ರೀಂ ಕೋರ್ಟ್ ಐತಿಹಾಸಿಕ ತೀರ್ಪು ನೀಡಿದ ನಂತರವಂತೂ ಅಯೋಧ್ಯೆ ಪ್ರದೇಶದ ರೂಪವೇ ಬದಲಾಯಿತು. ಪ್ರಧಾನ ಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವೂ ಅಯೋಧ್ಯೆ ಪ್ರದೇಶಾಭಿವೃದ್ಧಿಗೆ ಪಣತೊಟ್ಟಿತು. ಸಾವಿರಾರು ಕೋಟಿ ರೂ. ಮೌಲ್ಯದ ರೂಪುರೇಷೆಗಳನ್ನು ಸಿದ್ಧಪಡಿಸಿತು. ಅಯೋಧ್ಯೆ ಪ್ರದೇಶದಲ್ಲಿ ಈಗಾಗಲೇ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ 32 ಸಾವಿರ ಕೋಟಿ ರೂ. ಮೌಲ್ಯದ ಅಭಿವೃದ್ಧಿ ಯೋಜನೆಗಳು, ಬೃಹತ್ ಕಾಮಗಾರಿಗಳು ಚಾಲ್ತಿಯಲ್ಲಿವೆ ಎಂದು ಅಲ್ಲಿನ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಮಾಹಿತಿ ನೀಡುತ್ತಾರೆ. ಒಟ್ಟಿನಲ್ಲಿ ರಾಮಭಕ್ತರ ನೆಲವಾಗಬೇಕು ಎಂಬುದು ಈ ಇಬ್ಬರೂ ದಿಗ್ಗಜರು (ಮೋದಿ ಮತ್ತು ಆದಿತ್ಯನಾಥ) ಸಂಕಲ್ಪ ತೊಟ್ಟಿದ್ದಾರೆ ಮತ್ತು ಸಮಸ್ತ ಜಗತ್ತಿನ ಹಿಂದುಗಳ ಧ್ವನಿಯಾಗಿ ಅವರು ಅವಿರತ ಶ್ರಮಿಸುತ್ತಿದ್ದಾರೆ. ದೇಶದ ನಾನಾ ಮೂಲೆಗಳಿಂದ ಅಯೋಧ್ಯೆಗೆ ಸಂಪರ್ಕ ಕಲ್ಪಿಸುವ ಬಹುತೇಕ ಎಲ್ಲ ಯೋಜನೆಗಳು ಪೂರ್ಣಗೊಂಡಿವೆ. ವಿಮಾನ, ರೈಲು ಮತ್ತು ವಾಹನಗಳಲ್ಲಿ ಅಲ್ಲಿಗೆ ಈಗ ಸಲೀಸಾಗಿ ತಲುಪಬಹುದು. ಅಲ್ಲಿಗೆ ಈಗ ಕಾಲಿಟ್ಟರೆ ಹಳೆಯ ಅಯೋಧ್ಯೆ ನಿಮಗೆ ಸಿಗುವುದಿಲ್ಲ. ಬದಲಿಗೆ ಸುಸಜ್ಜಿತ ಮೂಲ ಸೌಕರ್ಯಗಳನ್ನು ಹೊಂದಿರುವ, ಭಕ್ತರನ್ನು ಕೈ ಬೀಸಿ ಕರೆಯುವ ಸೌಲಭ್ಯಗಳು ನಿಮ್ಮನ್ನು ಆಹ್ವಾನಿಸುತ್ತವೆ. ಕೆಲವೆ ದಿನಗಳಲ್ಲಿ ಈ ಅಯೋಧ್ಯೆ ಎಂಬ ಮಹಾ ಗುರುತ್ವಾಕರ್ಷಣೆ ಪ್ರದೇಶವು ಇಡೀ ದೇಶದ ಹೆಚ್ಚು ಪ್ರವಾಸಿಗರನ್ನು ಮತ್ತು ಭಕ್ತರನ್ನು ಸೆಳೆಯುವ ಧಾರ್ಮಿಕ ಕೇಂದ್ರಬಿಂದು ಆಗುವುದರಲ್ಲಿ ಅನುಮಾನವೇ ಬೇಡ. ಈಗಾಗಲೇ 2021ರಲ್ಲಿ ಅಯೋಧ್ಯೆಗೆ 1.57 ಕೋಟಿ ಪ್ರವಾಸಿಗರು, ರಾಮನ ಭಕ್ತರು ಭೇಟಿ ನೀಡಿದ್ದರು. ಗಮನಿಸಬೇಕಾದ ವಿಷಯವೆಂದರೆ 2022ರಲ್ಲಿ ರಾಮಮಂದಿರ ನಿರ್ಮಾಣ ವೇಗವಾಗಿ ಸಾಗಿತೋ ಆಷ್ಟೇ ವೇಗದಲ್ಲಿ ಭಕ್ತರು ಮತ್ತು ಪ್ರವಾಸಿಗರು ಭೇಟಿ ನೀಡುವ ಪರಿಯೂ ಹೆಚ್ಚಾಯಿತು. 2022ರಲ್ಲಿ ಈ ಪುಣ್ಯಭೂಮಿಗೆ 2.39 ಕೋಟಿ ಪ್ರವಾಸಿಗರು ಭೇಟಿ ನೀಡಿದ್ದಾರೆ ಎಂಬ ಅಂದಾಜಿದೆ. ಈಗ ಜನವರಿ 22ರ ನಂತರ (ರಾಮಮಂದಿರ ಲೋಕಾರ್ಪಣೆ ನಂತರ) ಈ ಪುಣ್ಯಭೂಮಿ ದರ್ಶನ ಮಾಡುವವರ ಸಂಖ್ಯೆ ನಿರೀಕ್ಷೆಗೂ ಮೀರಿ ಹೆಚ್ಚಾಗುತ್ತದೆ. ಜತೆ ಅಲ್ಲಿರುವ ಸ್ಥಳೀಯರ ವ್ಯಾಪಾರ ವಹಿವಾಟುಗಳು ಸಹ ಗರಿಗೆದರಲಿದೆ. ನಾವೂ ಮತ್ತು ನೀವು ಮುಂದಿನ ದಿನಗಳಲ್ಲಿ ಅಲ್ಲಿಗೆ ಭೇಟಿ ಕೊಡೋಣ

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**

ಇ-ಮೇಲ್:hampitimes@gmail.com

M: 9448633038

# ಬನ್ನಿ ಹೊಸ ಸಂ.....ಕ್ರಮಣದತ್ತ ಹೆಜ್ಜೆ ಹಾಕೋಣ

ಸಂಕ್ರಾಂತಿ ಎಂದರೆ ಸಂಕ್ರಮಣದ ಕಾಲ ಬದುಕಿನಲ್ಲಿ ಬರುವ ಸುಖ-ದುಃಖ, ನೋವು-ನಲಿವು ಸೋಲು-ಗೆಲುವು ಹೀಗೆ ಎಲ್ಲವನ್ನು ಸಮಚಿತ್ತದಿಂದ ಸ್ವೀಕರಿಸುವ ಕಾಲ. ಕೆಲ ಅನವಶ್ಯಕ ಅಭ್ಯಾಸಗಳನ್ನು ನಾವು ನಿರಂತರವಾಗಿ ಪಾಲಿಸಿಕೊಂಡು ಬಂದಿರುತ್ತೇವೆ. ಇನ್ನು ಕೆಲವು ನಾವು ಬಿಟ್ಟೇನೆಂದರೂ ಬಿಡದೆ ನಮ್ಮೊಂದಿಗೆ ಇರುತ್ತವೆ. ಇನ್ನೂ ಕೆಲವು ಅಭ್ಯಾಸಗಳನ್ನು ಸಾಮಾಜಿಕ ಮನ್ನಣೆಯ ಕಾರಣದಿಂದ ನಾವು ನಿಭಾಯಿಸಬೇಕಾಗುತ್ತದೆ. ಮತ್ತೆ ಕೆಲವು ಒಳ್ಳೆಯ ಅಭ್ಯಾಸಗಳನ್ನು ಬೆಳೆಸಿಕೊಳ್ಳಬೇಕಾಗಿರುತ್ತದೆ. ಉತ್ತಮ ಅಭ್ಯಾಸಗಳು ವ್ಯಕ್ತಿಯ ವೈಯುಕ್ತಿಕ,ಸಾಮಾಜಿಕ ಮತ್ತು ಸಾಂಸ್ಕೃತಿಕ ಬೆಳವಣಿಗೆಗೆ ಕಾರಣವಾಗುತ್ತದೆ. ಉತ್ತಮ ದೈಹಿಕ ಆರೋಗ್ಯ, ಮಾನಸಿಕ ಸಂತೃಪ್ತಿಯನ್ನು ಕೊಡುತ್ತದೆ. ಬನ್ನಿ ಈ ಸಂಕ್ರಮಣ ಕಾಲದಲ್ಲಿ ಅಂತಹ ಹಲವು ಅಭ್ಯಾಸಗಳ ಕುರಿತು ಧೇನಿಸೋಣ. ಮೈಗೂಡಿಸಿಕೊಳ್ಳೋಣ, ಅನುಷ್ಠಾನಕ್ಕೆ ತರೋಣ..

ನೀರು....ನಮ್ಮ ಬಾಳಿನಲ್ಲಿ ಅತ್ಯಂತ ಅವಶ್ಯಕ ಪಾತ್ರವನ್ನು ವಹಿಸುತ್ತದೆ. ನಮ್ಮ ದೇಹದ ಶೇಕಡಾ 60 ಭಾಗ ನೀರು ತುಂಬಿಕೊಂಡಿದೆ. ಆದರೂ ಕೂಡ ಅವಶ್ಯಕ ಪ್ರಮಾಣದ ನೀರು ಸೇವನೆ ಮಾಡದೆ ಇರುವುದರಿಂದ ನಾವು ಆಮ್ಲ ಪಿತ್ತ, ಹುಳಿತೇಗು, ಹೊಟ್ಟೆ ಉಬ್ಬರ, ವಾಯು ಬಾಧೆ ಮತ್ತು ಕರುಳಿನಲ್ಲಿ ಜೀರ್ಣಗೊಂಡ ಶೇಷದ ಅಸಮರ್ಪಕ ಚಲನೆಗೆ ಮತ್ತು ಮಲಬದ್ಧತೆಯ ಸಮಸ್ಯೆಗೆ ಕಾರಣವಾಗುತ್ತದೆ ಆದ್ದರಿಂದ ಕನಿಷ್ಠ 8 ಲೋಟಗಳಷ್ಟು ಅಂದರೆ ಸುಮಾರು ಎರಡುವರೆ ಲೀಟರ್ ನಷ್ಟು ನೀರನ್ನು ಪ್ರಯತ್ನಪೂರ್ವಕವಾಗಿ ಕುಡಿಯುವ ಸಂಕಲ್ಪ ಮಾಡಿರಿ

ಆಹಾರ....ಆಹಾರ ಕೂಡ ನಮ್ಮ ಮೂಲಭೂತ ಅವಶ್ಯಕತೆಗಳಲ್ಲಿ ಒಂದು ಮತ್ತು ಆಹಾರ ಸಂಪಾದನೆಗಾಗಿ ದುಡಿಯುವುದು ಮನುಷ್ಯನ ಜೀವನದ ಅವಿಭಾಜ್ಯ ಕರ್ತವ್ಯ. ಸಿಕ್ಕಲ್ಲಿ, ಸಿಕ್ಕಷ್ಟು, ಸಿಕ್ಕು ಸಿಕ್ಕಂತೆ ತಿಂದು ಮೈ ಬೆಳಸಿಕೊಳ್ಳುವುದು ಸರಿಯಲ್ಲ. ನಮ್ಮ ದೇಶದ ಎಷ್ಟೋ ಜನರು ಒಂದು ಹೊತ್ತಿನ ಸಂಪೂರ್ಣ ಆಹಾರಕ್ಕಾಗಿ ಇಂದಿಗೂ ಒದ್ದಾಡುತ್ತಾರೆ. ಸಾವಿರಾರು ಮಕ್ಕಳು ಪ್ರತಿದಿನ ಅಪೌಷ್ಟಿಕತೆಯಿಂದ ನರಳುತ್ತಾರೆ ಮತ್ತು ಸಾಯುತ್ತಾರೆ ಕೂಡ. ಅಂತದ್ದರಲ್ಲಿ ಆಹಾರವನ್ನು ಪೋಲು ಮಾಡದೆ ನಿಯಮಿತವಾಗಿ ಆಹಾರ ಸೇವಿಸಬೇಕು. ಆಹಾರವನ್ನು ಹೆಚ್ಚು ಹೆಚ್ಚು ತಯಾರಿಸದೆ ತಯಾರಿಸಿದ ಆಹಾರವನ್ನು ತಂಗಳು ಪೆಟ್ಟಿಗೆಗೆ ತುಂಬದೆ, ತುಂಬಿದ ಕಾರಣಕ್ಕಾಗಿಯೇ ಅದನ್ನು ಪದೇ ಪದೇ ಬಿಸಿ ಮಾಡಿ ಸೇವಿಸುವ ಕರ್ಮ ಬೇಕಾಗಿಲ್ಲ. ಸಮಯಕ್ಕೆ ಸರಿಯಾಗಿ ನಮ್ಮ ಅವಶ್ಯಕತೆಗೆ ತಕ್ಕಷ್ಟು ತಾಜಾ ಆಹಾರವನ್ನು ತಯಾರಿಸಿ ಸೇವಿಸುವ ಸಂಕಲ್ಪವನ್ನು ಮಾಡಿರಿ. ಆದಷ್ಟು ಹೊರಗಿನ ಆಹಾರವನ್ನು ತ್ಯಜಿಸಿರಿ.

ನಡಿಗೆ.... ನಮ್ಮ ಜೀವನದ ಇನ್ನೊಂದು ಮುಖ್ಯ ಸಂಕಲ್ಪವಾಗಿರಲಿ. ಇತ್ತೀಚಿನ ವರದಿಗಳ ಪ್ರಕಾರ ನಮ್ಮನ್ನು ಕಟ್ಟಿ ಹಾಕಿರುವುದು ಕೇವಲ ಆಹಾರ, ವ್ಯಾಯಾಮರಹಿತ ಜೀವನ ಶೈಲಿ ಮಾತ್ರವೇ ಅಲ್ಲ ಕುರ್ಚಿಯು ಕೂಡ ನಮ್ಮನ್ನು ಕಟ್ಟಿ ಹಾಕಿದೆ. ದೀರ್ಘಕಾಲ ಕುಳಿತೇ ಕಾರ್ಯನಿರ್ವಹಿಸುವುದರಿಂದ ಮೊಣಕಾಲು ಗಂಟು ಹಿಡಿದಂತಾಗಿ ಸೆಳೆತ ಉಂಟಾಗುತ್ತದೆ. ಸತತವಾಗಿ ಕುಳಿತುಕೊಂಡೇ ಇರುವುದನ್ನು ಅಭ್ಯಾಸ ಮಾಡಿಕೊಂಡರೆ ಪೃಷ್ಠ ಮತ್ತು ಸೊಂಟದ ಭಾಗದಲ್ಲಿ ಬೊಜ್ಜು ಆವರಿಸಿಕೊಳ್ಳುತ್ತದೆ. ಹೊಟ್ಟೆಯ ಬೊಜ್ಜು ಇದಕ್ಕೆ ಸೇರಿಕೊಂಡರೆ ಮನುಷ್ಯನ ದೇಹದ ವಿವಿಧ ಅಂಗಗಳು ದೈನಂದಿನ ಕೆಲಸ ಕಾರ್ಯಗಳನ್ನು ನಿರ್ವಹಿಸುವಲ್ಲಿ ಮುಷ್ಕರ ಹೂಡುತ್ತವೆ. ಆದ್ದರಿಂದ ಪ್ರತಿ ಅರ್ಧ ಗಂಟೆಗೊಮ್ಮೆ ನೀವು ಕುಳಿತ ಜಾಗದಿಂದ ಎದ್ದು ಕೆಲವು ಹೆಜ್ಜೆ ನಡೆಯುವುದು ಒಳಿತು. ದಿನಕ್ಕೆ ಅತ್ಯಂತ ಕಡಿಮೆ ಎಂದರು ಏಳೆಂಟು ಸಾವಿರ ಹೆಜ್ಜೆಗಳ ನಡಿಗೆಯ ಗುರಿ ನಿಮ್ಮದಾಗಿರಲಿ.

ಧ್ಯಾನ... ದೈಹಿಕ ಆರೋಗ್ಯದ ಜೊತೆ ಜೊತೆಗೆ ಮಾನಸಿಕ ಆರೋಗ್ಯವು ಮನುಷ್ಯನಿಗೆ ಬೇಕೇ ಬೇಕು. ದಾವಂತದ ಈ ಬದುಕಿನಲ್ಲಿ ನಮಗೆ ಧ್ಯಾನದ ಕುರಿತ ಒಲವು ಕಡಿಮೆ. ಧ್ಯಾನ ಎನ್ನುವುದು ಕೈಗೆ ಸಿಕ್ಕದ ಕನಸಿನ ಕನ್ಯೆ. ಆದರೆ ಸತತವಾಗಿ ಆಕೆಯ ಹಿಂದೆ ಬಿದ್ದರೆ ಆಕೆ ನಮ್ಮ ಕೈ ಹಿಡಿಯುತ್ತಾಳೆ ನಮ್ಮನ್ನು ತನ್ನ ಶಾಂತಿ ಸಮಾಧಾನಗಳ ಉಯ್ಯಾಲೆಯಲ್ಲಿಟ್ಟು ತೂಗುತ್ತಾಳೆ,



ಪೊರೆಯುತ್ತಾಳೆ. ಧ್ಯಾನದಿಂದ ಒತ್ತಡಕ್ಕೆ ತಡೆ ಹಾಕಬಹುದು. ಆದ್ದರಿಂದ ದಿನದಲ್ಲಿ ಒಂದೇ ಬಾರಿ 10 ರಿಂದ 20 ನಿಮಿಷಗಳ ಕಾಲ ಧ್ಯಾನ ಮಾಡಲಾಗದಿದ್ದರೂ ಸಹ ಎರಡು ಗಂಟೆಗೊಮ್ಮೆ ನಾಲ್ಕೈದು ನಿಮಿಷ ಕಾಲ ಏನನ್ನು ಮಾಡದೆ ಕಣ್ಣು ಮುಚ್ಚಿ ದೇಹದ ಮತ್ತು ಉಸಿರಾಟದಲ್ಲಾಗುವ ಬದಲಾವಣೆಗಳನ್ನು ಗಮನಿಸಿ. ಮತ್ತು ಧ್ಯಾನಿಸುವುದನ್ನು ದೈನಂದಿನ ಕ್ರಿಯೆಯಾಗಿ ರೂಢಿಯಲ್ಲಿ ತನ್ನಿ ಒತ್ತಡವನ್ನು ದೂರವಿರಿಸಿ.

ಒಳ್ಳೆಯ ನಿದ್ರೆ... ದಿಂಬಿನ ಮೇಲೆ ತಲೆ ಇಟ್ಟರೆ ಸಾಕು ಸುಖವಾದ ನಿದ್ರೆ ಬರಲು ಎಂಬಂತಹ ಮನಸ್ಥಿತಿಯನ್ನು ಹೊಂದಿರಬೇಕು. ಉತ್ತಮ ಆರೋಗ್ಯ, ಸುಮಧುರವಾದ ಕೌಟುಂಬಿಕ ಬಾಂಧವ್ಯಗಳು, ಆರೋಗ್ಯಕರ ಹವ್ಯಾಸಗಳು, ಮನುಷ್ಯನಿಗೆ ಒಳ್ಳೆಯ ನಿದ್ರೆಯನ್ನು ಕೂಡ ತಂದುಕೊಡಬಲ್ಲವು. ನಿದ್ರೆ ನಮ್ಮೆಲ್ಲಾ ಮಾನಸಿಕ ಕ್ಲೇಶಗಳು, ಜಾಡ್ಯಗಳು, ಸಂಕಷ್ಟಗಳು ಮತ್ತು ಅವಿಶ್ರಾಂತ ಕಾರ್ಯ ಚಟುವಟಿಕೆಗಳಿಗೆ ಉತ್ತಮ ಮದ್ದಾಗಿ ಕಾರ್ಯ ನಿರ್ವಹಿಸುವುದರಿಂದ ರಾತ್ರಿ ಸಮಯದಲ್ಲಿ ಮೊಬೈಲ್ ಫೋನನ್ನು ದೂರವಿರಿಸಿ ಒಳ್ಳೆಯ ನಿದ್ರೆಯನ್ನು ಮಾಡುತ್ತೇವೆಂಬ ಸಂಕಲ್ಪವನ್ನು ಮಾಡಬೇಕು.

ಹಳೆಯ ತಪ್ಪುಗಳಿಂದ ಕಲಿಯಿರಿ ಮತ್ತು ಮುನ್ನಡೆಯಿರಿ.... ಎಲ್ಲಾ ತಪ್ಪುಗಳನ್ನು ನಾವೇ ಮಾಡಬೇಕೆಂದಿಲ್ಲ. ಬೇರೆಯವರು ಮಾಡಿರುವ ತಪ್ಪುಗಳಿಂದಲೂ ನಾವು ಪಾಠ ಕಲಿಯಬಹುದು. ಬದುಕಿನಲ್ಲಿ ಹೊಸ ದಿಕ್ಕನ್ನು ತೋರಿಸುವ ಪಾಠಗಳಾಗಬೇಕು ನಮ್ಮ ತಪ್ಪುಗಳು. ತಪ್ಪನ್ನು ತಿದ್ದಿಕೊಳ್ಳುವುದು ಮತ್ತು ಮತ್ತೆ ತಪ್ಪುಗಳೆಸಗದಂತೆ ಮುನ್ನಡೆಯುವುದು ಬದುಕಿನ ಮತ್ತೊಂದು ಮೈಲಿಗಲ್ಲಾಗಬೇಕು.

ಇದರ ಜೊತೆ ಜೊತೆಗೆ ಗಿಡ ನೆಡುವುದು, ಕೈತೋಟದ ನಿರ್ವಹಣೆ, ಮುಂಜಾನೆ ಮತ್ತು ಸಂಜೆಯ ಎಳೆ ಬಿಸಿಲಿನಲ್ಲಿ ನಡಿಗೆ, ನಂಜಿನ ಮಾತುಗಳನ್ನಾಡುವವರನ್ನು ದೂರವಿಡುವುದು, ಚಿಕ್ಕ ಪುಟ್ಟ ಹಂತಗಳಲ್ಲಿ ಯಶಸ್ಸನ್ನು ಸಂಗಡಿಸಿ ಒಂದೊಂದೇ ಮೆಟ್ಟಿಲುಗಳನ್ನೇರುವುದು, ನಮ್ಮ ಜೊತೆಗಿರುವವರನ್ನು ಸಹ ನಮ್ಮ ಜೀವನ ಪಯಣದಲ್ಲಿ ಕರೆದೊಯ್ಯುವುದು ಹೀಗೆ ಹತ್ತು ಹಲವು ಯೋಜನೆಗಳನ್ನು ಹಾಕಿಕೊಂಡು ಅದರಂತೆಯೇ ನಡೆಯುವ ಸಂಕಲ್ಪಗಳನ್ನು ಮಾಡೋಣ. ಬನ್ನಿ ಹೊಸ ಸಂ.....ಕ್ರಮಣದತ್ತ ಹೆಜ್ಜೆ ಹಾಕೋಣ

**– ವೀಣಾ ಹೇಮಂತಗೌಡ ಪಾಟೀಲ್**
ಮುಂಡರಗಿ, ಗದಗ

# ಮಕ್ಕಳನ್ನು ಅವರಿದ್ದಂತೆ ಒಪ್ಪಿಕೊಳ್ಳಿ !

**ನಿಮ್ಮ ಕನಸುಗಳನ್ನು ಅವರಲ್ಲಿ ಒತ್ತಾಯ ಪೂರ್ವಕವಾಗಿ ಬಿತ್ತುವ ಪ್ರಯತ್ನ ಮಾಡಬೇಡಿ**

ಪ್ರತಿಯೊಬ್ಬರು ಕಲಿಯಬೇಕು, ಬೆಳೆಯಬೇಕು, ಏನಾದರೊಂದು ಸಾಧಿಸಬೇಕು, ಸಾಧಿಸಿ ಜೀವನವನ್ನು ಸಾರ್ಥಕಗೊಳಿಸಿಕೊಳ್ಳಬೇಕು, ಇದರಲ್ಲೇನು ತಪ್ಪಿಲ್ಲ. ಆದರೆ ಸಾಧಿಸುವ ಭರದಲ್ಲಿ ನಾನು ಏನು? ಮತ್ತು ನನ್ನ ಸಾಮರ್ಥ್ಯವೇನು? ಎನ್ನುವ ಅರಿವು ಅಪೇಕ್ಷಣೀಯ ಅಂತೆಯೇ, ಪಾಲಕರಾದ ನಮ್ಮ ಆಸಕ್ತಿ, ಮತ್ತು ಅನುಭವ ನಮ್ಮ ಮಕ್ಕಳ ಆಸಕ್ತಿ, ಮತ್ತು ಅನುಭವಗಳಿಗಿಂತ ಭಿನ್ನ ಎನ್ನುವುದನ್ನು ಮನಗಾಣಬೇಕು.

ಹಾಗೆಯೆ ನಮ್ಮ ಮಕ್ಕಳ ಮತ್ತು ಇತರರ ಮಕ್ಕಳ ಶಕ್ತಿ, ಸಾಮರ್ಥ್ಯ, ಆಸಕ್ತಿ, ಅಭಿರುಚಿ ಬೇರೆ ಬೇರೆಯೇ ಆಗಿರುತ್ತದೆ, ಪ್ರತಿಯೊಬ್ಬ ಮಗುವಿಗೂ ತನ್ನದೇ ಆದ ವೈಯಕ್ತಿಕ ಭಿನ್ನತೆಗಳು, ವ್ಯಕ್ತಿತ್ವದ ಭಿನ್ನತೆಗಳನ್ನು ನಾವು ಕಾಣುತ್ತೇವೆ, ಹೀಗಿರುವಾಗ ಇತರರೊಂದಿಗೆ ನಮ್ಮ ಮಕ್ಕಳನ್ನು ಹೋಲಿಸಿಕೊಳ್ಳುವುದು, ಅವರಂತೆ ಇವನಿಲ್ಲವಲ್ಲ ಎಂದು ಕೊರಗುವುದು, ಅವರಂತೆಯೇ ನೀನು ಮಾಡು ಎಂದು ಮಕ್ಕಳ ಮೇಲೆ ಒತ್ತಡ ಹಾಕುವುದು ಸಲ್ಲದು, ಒಂದು ವೇಳೆ ನೀವು ಹಾಗೆ ಮಾಡಿದ್ದೇ ಆಗಿದ್ದರೆ ಖಂಡಿತವಾಗಿ ನೀವು ತಪ್ಪುದಾರಿಯಲ್ಲಿದ್ದೀರಿ ಎಂದು ತಿಳಿಯಿರಿ ಮತ್ತು ನಿಮ್ಮ ಮಗುವಿನ ಭವಿಷ್ಯವನ್ನು ಹಾಳು ಮಾಡುತಿದ್ದೀರಿ ಎಂದೇ ಅರ್ಥ!.

ಇಂತಹ ಸಂದರ್ಭದಲ್ಲಿ ನಿಮ್ಮ ಮಕ್ಕಳ ನಿಮ್ಮಿಂದ, ಅವರ ಸ್ನೇಹಿತರಿಂದ, ಸಮಾಜದಿಂದ ವಿಮುಖರಾಗಬಹುದು. ಅವರ ಸಹಜ ಬೆಳವಣಿಗೆಯಲ್ಲಿ, ಸಹಜ ಆಚರಣೆಯಲ್ಲಿ, ನಡೆವಳಿಕೆಗಳಲ್ಲಿ ಅಸಹಜ ಹಾಗು ವ್ಯತಿರಿಕ್ತ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ.

ಹಾಗಾಗಿ ನಿಮ್ಮ ಮಕ್ಕಳಲ್ಲೇ ವಿಭಿನ್ನವಾದ, ಅದ್ಭುತ ವಾದ, ಆಸಕ್ತಿದಾಯಕವಾದ ಇತರರಿಗೆ ಅನುಕರಣೆಯಾಗಬಲ್ಲ ಸಾಮರ್ಥ್ಯ ಇರಬಹುದಲ್ಲವೆ? ಅದನ್ನು ಹುಡುಕಿ, ಅದೇ ನಿಟ್ಟಿನಲ್ಲಿ ಬೇಳೆಯಲು ಪ್ರೋತ್ಸಾಹ ನೀಡಿ, ಒಂದೊಳ್ಳೆ ವ್ಯಕ್ತಿಯನ್ನು, ವ್ಯಕ್ತಿತ್ವವನ್ನು ಸಮಾಜಕ್ಕೆ ನೀಡಿ ನಿಮ್ಮ ಮಕ್ಕಳನ್ನು ಅವರಿದ್ದಂತೆ ಒಪ್ಪಿಕೊಳ್ಳಿ, ಏಕೆಂದರೆ ಅವರು ನಿಮ್ಮ ಮಕ್ಕಳು, ಅವರೇಕೆ ಬೇರೆಯವರಂತಾಗಬೇಕು?

ನೆನಪಿರಲಿ ಅವರು ನಿಮ್ಮಂತೆಯೂ ಆಗಬೇಕಿಂದಿಲ್ಲ! ಅವರು ಅವರಂತೆಯೇ ಆಗಲಿ, ಅವರಲ್ಲಿನ ಸುಪ್ತ ಸಾಮರ್ಥ್ಯ ಆಚೆ ಬರಲಿ, ಅವನು ನಿಮ್ಮ ಪ್ರಕಾರ ದಡ್ಡನೊ, ಜಾಣನೊ, ಆಟಗಾರನೊ, ಹಾಡುಗಾರನೊ, ನೃತ್ಯ ಪಟವೊ, ಕವಿಯೊ ಅವನೇನೆ ಆಗಲಿ, ಅವನಿಚ್ಚೆಯಂತೆ ಅವನಾಗಲಿ ಅವನಲ್ಲಿನ/ಳಲ್ಲಿನ ಆ ಸಾಮರ್ಥ್ಯವನ್ನು ಪ್ರೋತ್ಸಾಹಿಸಿ, ಅದೇ ನಿಟ್ಟಿನಲ್ಲಿ ಪ್ರೇರೇಪಿಸಿ ಅಷ್ಟೇ.

ನೆನಪಿರಲಿ ನಿಮ್ಮ ಕನಸುಗಳನ್ನು ಅವರಲ್ಲಿ ಒತ್ತಾಯ ಪೂರ್ವಕವಾಗಿ ಬಿತ್ತುವ ಪ್ರಯತ್ನ ಮಾಡಬೇಡಿ, ಅವರನ್ನು ಅವರಿದ್ದಂತೆ ಒಪ್ಪಿಕೊಳ್ಳಿ.

"ಹಾಂ ಒಂದು ವೇಳೆ ಸಮಾಜ ಒಪ್ಪತಕ್ಕದಲ್ಲದ ನಡವಳಿಕೆಗಳು ನಿಮ್ಮ ಮಕ್ಕಳಲ್ಲಿ ಕಂಡುಬಂದರೆ, ಖಂಡಿತಾ ಪಾಲಕರಾಗಿ ಅವುಗಳನ್ನು ಸೂಕ್ತ ಮಾರ್ಗದರ್ಶನದಿಂದ, ಸರಿಯಾದ ವ್ಯಕ್ತಿಗಳಿಂದ, ತಿದ್ದಲೇ ಬೇಕು ಇದು ಸಹ ಪಾಲಕರಾದವರ ಬಹು ಮಖ್ಯ ಜವಾಬ್ದಾರಿ".

ಪ್ರತಿಯೊಬ್ಬ ಮಗುವಿಗೂ ತನ್ನದೇ ಆದ ವೈಯಕ್ತಿಕ ಭಿನ್ನತೆಗಳು, ವ್ಯಕ್ತಿತ್ವದ ಭಿನ್ನತೆಗಳನ್ನು ನಾವು ಕಾಣುತ್ತೇವೆ, ಹೀಗಿರುವಾಗ ಇತರರೊಂದಿಗೆ ನಮ್ಮ ಮಕ್ಕಳನ್ನು ಹೋಲಿಸಿಕೊಳ್ಳುವುದು, ಅವರಂತೆ ಇವನಿಲ್ಲವಲ್ಲ ಎಂದು ಕೊರಗುವುದು, ಅವರಂತೆಯೇ ನೀನು ಮಾಡು ಎಂದು ಮಕ್ಕಳ ಮೇಲೆ ಒತ್ತಡ ಹಾಕುವುದು ಸಲ್ಲದು.



**ಜಿ. ಶಿವಕುಮಾರ್ ಸೋಗಿ,**
**ಕಾರವಾರ, ಕೈಗಾ.**
9008130204

ಹಾಗಂತ ಮಕ್ಕಳನ್ನು ಅವರಷ್ಟಕ್ಕೆ ಅವರನ್ನು ಅವರಿಷ್ಟದಂತೆ ಬಿಟ್ಟುಬಿಡಲಾದೀತೆ? ಎನ್ನುವವರ ಮನಸ್ಸಿನ ತಳಮಳ ಸರಿಯಾದುದ್ದೇ, ಹಾಗೆ ಯೋಚನೆ ಮಾಡುವುದು ಸರಿಯೇ. ಆದರೆ ನಾವಿಲ್ಲಿ ಕೆಲವು ವಿಚಾರಗಳನ್ನು ಸ್ಪಷ್ಟಪಡಿಸಿಕೊಳ್ಳಬೇಕು ಉದಾಹರಣೆಗೆ ಈ ಕಾಳಜಿ, ಬೆಂಬಲ, ಪ್ರೋತ್ಸಾಹ ಮತ್ತು ಒತ್ತಡಗಳ ಅರ್ಥ ಮತ್ತು ಇವುಗಳ ನಡುವಿನ ವ್ಯತ್ಯಾಸವನ್ನು ಯಾರು ಸೂಕ್ಷ್ಮವಾಗಿ ಗ್ರಹಿಸುತ್ತಾರೆ ಅವರ ದೈನಂದಿನ ನಡವಳಿಕೆಯಲ್ಲಿ ಕಂಡುಬರುವಂತಹ ಅಂಶಗಳನ್ನು ಹಾಗು ಈ ಕಾಳಜಿ, ಬೆಂಬಲ, ಪ್ರೋತ್ಸಾಹ ಮತ್ತು ಒತ್ತಡಗಳ ನಡುವಿನ ಅರ್ಥ ವ್ಯತ್ಯಾಸವನ್ನು ತಿಳಿದುಕೊಳ್ಳದವರ ದೈನಂದಿನ ವರ್ತನೆಯಲ್ಲಿನ ಅಂಶಗಳನ್ನು ಅವಲೋಕಿಸಿದರೆ ಸಾಕು ಒಂದು ಹಂತಕ್ಕೆ ನಾನು ಏನು ಮತ್ತು ಇತರರನ್ನು ಹೇಗೆ ಕಾಣಬೇಕು ಎನ್ನುವುದು ಸ್ಪಷ್ಟವಾಗುತ್ತದೆ.

ಸರಿ ಹಾಗಾದರೆ ನಮ್ಮ ಮಕ್ಕಳನ್ನು ಅವರಿದ್ದಂತೆ ಒಪ್ಪಿಕೊಳ್ಳೊದು ಅಂದರೆ ಏನು? ನಮ್ಮ ಮಕ್ಕಳು ಅವರಿದ್ದಂತೆ ಎಂದರೆ ಏನು? ಎಂಬುದನ್ನು ನಾವಿಲ್ಲಿ ಮೊದಲು ಸ್ಪಷ್ಟ ಪಡಿಸಿಕೊಳ್ಳೋಣ.

ನಮ್ಮ ಮಕ್ಕಳು ಅವರಿದ್ದಂತೆ ಎಂದರೆ,

1. ಮೊದಲನೆಯದು ಮಕ್ಕಳನ್ನು ಬಯಸುವಂತಹ ನವ-ಯುವ ಪಾಲಕರಲ್ಲಿ ಕೇಳಿಕೊಳ್ಳೊದು ಇಷ್ಟೆ ಏನೆಂದರೆ ಹುಟ್ಟುವಂತಹ ಮಕ್ಕಳು ಸಹಜವಾಗಿದ್ದು ಆರೋಗ್ಯವಂತರಾಗಿದ್ದರೆ ಸಾಕು. ಏಕೆಂಬುದನ್ನು ನಾನು ಇಲ್ಲಿ ಒತ್ತಿ ಹೇಳುವ ಅಗತ್ಯವಿಲ್ಲ ಎಂದು ಕೊಳ್ಳುತ್ತೇನೆ, ಸದ್ಯದ ಇಂತಹ ಪ್ರಕ್ಷುಬ್ದ ವಾತವರಣದಲ್ಲಿ ಆರೋಗ್ಯವಂತ ಮಕ್ಕಳಾದಗುವುದೇ ಪುಣ್ಯ, ಇಂತಹ ಒತ್ತಡದ ಜೀವನದಲ್ಲಿ, ಮಾಲಿನ್ಯಯುಕ್ತ ಪರಿಸರದಲ್ಲಿ, ಕಲಬೆರಿಕೆಯ ಅಹಾರ ಪದ್ಧತಿಯಲ್ಲಿ, ಮಾನಸಿಕ ಗೊಂದಲದಲ್ಲಿರುವ ಜನಾಂಗದಲ್ಲಿ ಆರೋಗ್ಯವಂತ ಮಗು/ ಮಕ್ಕಳು ಹುಟ್ಟುವುದೇ ನಿಮ್ಮ ಸೌಭಾಗ್ಯ ಎಂದುಕೊಳ್ಳಿ, ಹಾಗೆನಾದರು ಆರೋಗ್ಯವಂತ ಮಗು ಹುಟ್ಟಿದ್ದೇ ಆದರೆ ನೀವು ನಿಜವಾಗಿಯೂ ಸೌಭಾಗ್ಯವಂತ ಅಷ್ಟೇ ಅಲ್ಲ ಅದೃಷ್ಟವಂತ ಪಾಲಕರೇ ಎಂದುಕೊಳ್ಳಿ ಮತ್ತು ಇದನ್ನೆ ಬಯಸಿ ಹಾಗು ಸಿಕ್ಕಿದ್ದನ್ನೇ ಒಪ್ಪಿಕೊಳ್ಳಿ. ಏಕೆಂದರೆ ನರಮಾನವರಾದ ನಮ್ಮಿಂದ ಇಷ್ಟು ಮಾತ್ರ ಸಾಧ್ಯ.

2. ಒಂದು ವೇಳೆ ಹುಟ್ಟುವಾಗಲೆ ಮಗು/ ಮಕ್ಕಳು ಅಂಗವೈಕಲ್ಯದಿಂದಲೂ, ಆನಾರೋಗ್ಯದಿಂದಲೂ ಅಥವಾ ವಿಶೇಷ ಆಸಕ್ತಿಯುಳ್ಳ , ವಿಶೇಷ ಚೈತನ್ಯದ ಮಕ್ಕಳಾಗಿ ಹುಟ್ಟಿದರೆ ನೀವು ನಿಜವಾಗಲೂ ಅದೃಷ್ಟವಂತ ಪಾಲಕರೇ ಎಂದುಕೊಳ್ಳಿ. ನಾನು ಹೀಗೇಕೆ ಹೇಳುತ್ತಿದ್ದೇನೆ ಎಂದರೆ ನಿಜವಾಗಿಯೂ ನೀಮಗೆ ನಿಮ್ಮ ಪಾಲಕತ್ವವನ್ನು ಪರಿಪೂರ್ಣವಾಗಿ ಅನುಭವಿಸಲು ಸಿಕ್ಕಂತಹ, ಅದು ಕೂಡ ಕೆಲವೇ ಕಲವು ಪಾಲಕರಿಗೆ ಸಿಗುವಂತಹ ಅವಕಾಶ ಎಂದುಕೊಳ್ಳಿ. ಅಂತಹ ಪಾಲಕರಲ್ಲಿ ನೀವೂ ಒಬ್ಬರು ಎನ್ನುವುದನ್ನು ಮರೆಯಬೇಡಿ. ಅಂತಹ ಮಕ್ಕಳ ಕುರಿತು ಮರಗುವ ಬದಲು, ನಿಮ್ಮ ಹಣೆಬರಹದ ಕುರಿತು ಕೊರಗುವ ಬದಲು, ಅಂತಹ ಮಕ್ಕಳ ಮುಂದೆ ಅವರಿಗೆ ಅನುಕೂಲವಾದಂತಹ ಅವಕಾಶಗಳ ಮಹಾಪೂರವನ್ನೆ ತೆರದಿಡಿ, ಆಸರೆಯಾಗಿ, ಅವರ ಪ್ರಯತ್ನಕ್ಕೆ ಒತ್ತಾಸೆಯಾಗಿ ನಿಲ್ಲಿ. ಖಂಡಿತವಾಗಿ ಅಂತಹ ಮಕ್ಕಳು ಯಶಸ್ವಿಯಾಗಿ ಮಹತ್ತರವಾದ ಸಾಧನೆಯನ್ನು ಮಾಡುತ್ತಾರೆ ಮತ್ತು ಅಂತಹ ಅನೇಕ ಉದಾಹರಣೆಗಳು ನಮ್ಮ ಪ್ರತಿ ನಿತ್ಯ ಜೀವನದಲ್ಲಿ ಜರುಗುತ್ತಲೇ ಇರುತ್ತವೆ.

3. ಮಕ್ಕಳು ಬೆಳೆ ಬೆಳೆಯುತ್ತಾ ವಿಭಿನ್ನ ಮತ್ತು ವಿಶಿಷ್ಠ ಆಸಕ್ತಿ, ಹವ್ಯಾಸಗಳನ್ನು ರೂಡಿಸಿಕೊಳ್ಳುತ್ತಾರೆ. ಹಾಗೆಯೆ ಪ್ರತಿಯೊಬ್ಬರೂ ಭಿನ್ನ ಮತ್ತು ವೈಶಿಷ್ಟಪೂರ್ಣವಾದಂತಹ ವ್ಯಕ್ತಿತ್ವವನ್ನು ಹೋದಿರುತ್ತಾರೆ. ಯಾವುದೇ ಕಾರಣಕ್ಕೂ ನೀನು ಅವರಂತೆ ಇಲ್ಲವಲ್ಲ, ಅವನು ಮಾಡಿದಂತೆ ನಿನ್ನಿಂದಾಗದು ಎನ್ನುವಂತಹ ಕ್ಷುಲ್ಲಕ ಹೋಲಿಕೆಯನ್ನು ಎಂದಿಗೂ ಮಾಡಬೇಡಿ. ಏಕೆಂದರೆ ವೈಯಕ್ತಿಕ ಭಿನ್ನತೆ ಮನುಷ್ಯ ಸಹಜ ಗುಣ. ಒಬ್ಬರಂತೆ ಇನ್ನೊಬ್ಬರು ಇರಬಾರದೆಂದಲ್ಲ, ಆದರೆ ಇರಲೇ ಬೇಕು ಎನ್ನುವುದು ಸಲ್ಲ.

4. ಪಾಲಕರಾದ ನಾವು ಎಷ್ಟೇ ಒತ್ತಡದಲ್ಲಿದ್ದರೂ, ಏನೇ ತೊಂದರೆಯಲ್ಲಿದ್ದರೂ ಅದರ ಪ್ರಭಾವ, ಪರಿಣಾಮ ಮಕ್ಕಳ ಮೇಲೆ ಉಂಟಾಗದಂತೆ ನೋಡಿಕೊಳ್ಳಿ. ಏಕೆಂದರೆ ಅವರಿನ್ನೂ ಮಕ್ಕಳು ಮರೆಯಬೇಡಿ. ನಿಮ್ಮ ಆಸೆಗಳನ್ನು, ನಿಮ್ಮ ಬಯಕೆಗಳನ್ನು ನಿಮ್ಮ ಬೇಡಿಕೆಗಳನ್ನು ನಿಮ್ಮ ಮಕ್ಕಳ ಮೇಲೆ ಹೇರಬೇಡಿ, ಅವರಿಗೆ ಅವರ ಬಾಲ್ಯವನ್ನು ಅನುಭವಿಸಲು ಬಿಡಿ. ಏಕೆಂದರೆ ಅದು ನೀವು ಅವರಿಗೆ ನೀಡುವ ಅವಕಾಶವಲ್ಲ, ಅದು ಅವರ ನೈತಿಕ ಹಕ್ಕು, ನಿಮ್ಮ ಆದ್ಯ ಕರ್ತವ್ಯ ಕೂಡ. ಹಾಗಾಗಿಯೇ ಮತ್ತೆ ಮತ್ತೆ ಹೇಳುತ್ತಿರುವುದು "ನಿಮ್ಮ ಕನಸುಗಳನ್ನು ನಿಮ್ಮ ಮಕ್ಕಳಲ್ಲಿ ಒತ್ತಾಯ ಪೂರ್ವಕವಾಗಿ ಬಿತ್ತುವ ಪ್ರಯತ್ನ ಮಾಡಬೇಡಿ" ನಿಮ್ಮ ಮಕ್ಕಳ ಕನಸುಗಳಿಗೆ ಒತ್ತಾಸೆಯಾಗಿ ನಿಲ್ಲಿ, ಸರಿ ತಪ್ಪುಗಳನ್ನು ತಿಳಿಹೇಳಿ, ಜವಾಬ್ದಾರಿಯನ್ನು ಅರಿಯುವಂತೆ ಮಾಡಿ ತಪ್ಪೇನಿಲ್ಲ. ಆದರೆ "ನಿಮ್ಮ ಮಕ್ಕಳನ್ನು ಅವರಿದ್ದಂತೆ ಒಪ್ಪಿಕೊಳ್ಳಿ " ಎನ್ನುವುದಷ್ಟೆ ಇಲ್ಲಿ ನಮ್ಮೆಲ್ಲರ ಕಳಕಳಿ.

# ಎಲ್ಲರು ಓದುತ್ತಿರುವಾಗ ನೀನ್ಯಾಕೆ ಓದು ನಿಲ್ಲಿಸಿದಿ...

## ಗೆದ್ದರೆ ಸಂತೋಷ, ಸೋತರೆ ಅನುಭವ ಎಂಬ ವಿವೇಕಾನಂದರ ಮಾತು ನನ್ನ ವಿದ್ಯಾರ್ಥಿಯ ಬದುಕಿನಲ್ಲಿ ನಿಜವಾಗಿದೆ.

ಯುವಶಕ್ತಿ ದೇಶದ ಬಹುದೊಡ್ಡ ಸಂಪತ್ತು. ಒಂದು ದಿನ ಊರಿಗೆ ಹೋಗುತ್ತಾ ಇದ್ದೆ. ಬಸ್ಸಿನಲ್ಲಿ ಕುಳಿತುಕೊಳ್ಳಲು ಸೀಟು ಸಿಗದೆ ಇದ್ದಾಗ ನಿಂತುಕೊಂಡೆ ಪ್ರಯಾಣ ಮಾಡುತ್ತಾ ಇದ್ದೆ...ಅಲ್ಲಿಯೆ ಕಾಣಿಸಿಕೊಂಡ ಒಬ್ಬ ಹುಡುಗ, ಮೇಡಂ ಈ ಕಡೆ ಬನ್ನಿ ನಿಮಗಾಗಿ ಸೀಟು ಹಿಡಿದ್ದಿದ್ದಿನಿ ಅಂತ ಹೇಳಿದ್ದು ಕಂಡುಬಂತು. ಅವನು ನನ್ನ ವಿದ್ಯಾರ್ಥಿ ಅಂತ ತಿಳಿದು ಬಂತು... ನನ್ನ ಹಿರಿಯ ವಿದ್ಯಾರ್ಥಿ ಕುಳಿತುಕೊಳ್ಳಲು ಸೀಟು ಕೊಟ್ಟ, ಕುಳಿತೆನು. ಯಾವಾಗಲೂ ನಗು ಮುಖ, ಮುಗ್ಧ ಮನಸ್ಸಿನ ನಾಚಿಕೆ ಸ್ವಭಾವದ ನನ್ನ ವಿದ್ಯಾರ್ಥಿಯ ಜೊತೆ ಮಾತನಾಡಲು ಪ್ರಾರಂಭಿಸಿದೆ. ಮುಂದೆ ಅವನನ್ನು ಮಾತಾಡಿಸಲು ಪ್ರಾರಂಭ ಮಾಡಿದ್ದೆ....ಎಲ್ಲಿಯವರೆಗೂ ಬಂತು ನಿನ್ನ ವಿದ್ಯಾಭ್ಯಾಸ.? ಅಂತ ಕೇಳಿದಾಗ, ಮೃದುವಾದ ಧ್ವನಿಯಲ್ಲಿ 9 ನೇಯ ತರಗತಿಯ ವರೆಗೆ ಮಾತ್ರ ಓದಿ ಶಾಲೆ ಬಿಟ್ಟಿದ್ದಿನಿ ಮೇಡಂ ಅಂತ ಹೇಳಿದನು.

ಕೇವಲ ಒಂಬತ್ತನೇ ತರಗತಿ ಕನಿಷ್ಟ ಎಸೆಸೆಲ್ಸಿ ಯಾದರೂ ಮುಗಿಸಬಾರದೆ ಎಂದು ಸ್ವಲ್ಪ ಕೋಪ ಮಾಡಿದಾಗ, ಇಲ್ಲ ಮೇಡಂ ನಮ್ಮ ಮನೆಯಲ್ಲಿ ಅಪ್ಪ ಅಮ್ಮನ ಮೇಲೆ ತುಂಬಾ ಸಾಲದ ಹೊರೆ ಇತ್ತು... ಅದಕ್ಕೆ ನಾನು ನಮ್ಮ ಹಾಗೂ ಸಂಬಂಧಿಕರ ಹೊಲ ಗದ್ದೆಗಳಲ್ಲಿ ಕೆಲಸ ಮಾಡುತ್ತಿದ್ದೇನೆ ಅಂತ ಹೇಳಿದ. ಅಷ್ಟೇ ಏಕೆ ಮೇಡಮ ನನ್ನ ಸಹೋದರ ನರ್ಸಿಂಗ್ ಓದು ಓದುತ್ತಿದ್ದಾನೆ, ಸಹೋದರಿಯರು ಕೂಡಾ ಚೆನ್ನಾಗಿ ಓದುತ್ತಿದ್ದಾರೆ ಅಂತ ಹೇಳಿದಾಗ ನನಗೆ ತುಂಬಾ ಕೋಪ ಬಂತು, ಏನಯ್ಯ ಎಲ್ಲರು ಓದುತ್ತಿರುವಾಗ ನೀನ್ಯಾಕೆ ಹೀಗೆ ಮಾಡಿದೆ ಅಂತ ಕೇಳಿದಾಗ. ಅಪ್ಪನ ಸಾಲದ ಹೊರೆ ಅವರು ಅನುಭವಿಸಿದ ದುಃಖ ನನ್ನಿಂದ ನೋಡಲು ಆಗೋದಿಲ್ಲ ಮೇಡಂಜಿ, ಅದಕ್ಕೆ ನಾನು ಅಪ್ಪನೊಂದಿಗೆ ಕೆಲಸದಲ್ಲಿ ಕೈಜೋಡಿಸಿದೆ ಎನ್ನುವಾಗ ನನಗೆ ಸ್ವಲ್ಪ ನೋವು ಆಯಿತು. ನಾನು ಮತ್ತೆ ಕೇಳಿದೆ, ಅವರೆಲ್ಲ ಚನ್ನಾಗಿ ಓದಿ ಮುಂದೆ ಒಳ್ಳೆಯ ಬದುಕು ಕಟ್ಟಿಕೊಳ್ಳುತ್ತಾರೆ, ನೀನು ಮುಗ್ಧ ನಿನ್ನ ಜೀವನ ಹೇಗೆ? ಅಂತ...... ಮೇಡಂಜಿ ನಾನು ನೌಕರಸ್ಥರಿಗಿಂತ ಹೆಚ್ಚು ಹಣವನ್ನು ಮಾಡಿಕೊಳ್ಳುತ್ತಿದ್ದೇನೆ. ಈಗ ನಾನು ಒಳ್ಳೆಯ ಜೀವನ ಸಾಗಿಸುತ್ತಿದ್ದೇನೆ ಅಂತ ಹೇಳುವಾಗ ಅವನ ಮುಖದಲ್ಲಿ ಉಲ್ಲಾಸ ಉತ್ಸಾಹ ನೋಡಿ ನನಗೆ ಬಹಳ ಖುಷಿ ಆಗಿತ್ತು.

ಇದೆಲ್ಲ ಹೇಗೆ ಸಾಧ್ಯ? ಎಂದು ನಾನು ಅವನಿಗೆ ಕೇಳಿದೆ. ಆವಾಗ ಅವನು ಹೇಳಿದ, ಅಪ್ಪನೊಂದಿಗೆ ಹೊಲ ಗದ್ದೆಗಳಲ್ಲಿ ಕೆಲಸ ಮಾಡುತ್ತಿದ್ದೇನೆ. ಹೊಲ ಗದ್ದೆಗಳಲ್ಲಿ ಚೆನ್ನಾಗಿ ಬೆಳೆ ಬೆಳೆಯುತ್ತೇವೆ. ಹಣ್ಣು ತರಕಾರಿಗಳನ್ನು ಬೆಳೆಸುವುದು ಇದರಿಂದ ಬಂದ ಹಣದಿಂದ. ದಿನನಿತ್ಯದ ಖರ್ಚು ವೆಚ್ಚಗಳನ್ನು ಮಾಡಿಕೊಳ್ಳುತ್ತೇವೆ. ನಮ್ಮ ಗದ್ದೆಯಲ್ಲಿ ಕುರಿ ಸಾಕಾಣಿಕೆ ಹಾಗೂ ಕುರಿಗಾಯಿ ಕೆಲಸ ಕೂಡ ಮಾಡುವುದರಿಂದ ಪ್ರತಿ 3 ತಿಂಗಳಿಗೊಮ್ಮೆ ಎಲ್ಲ ಖರ್ಚು ವೆಚ್ಚಗಳನ್ನು ತೆಗೆದು 40 ರಿಂದ 60 ಸಾವಿರ ರೂಪಾಯಿಗಳ ಹಣ ಸಂಪಾದನೆ ಮಾಡಿಕೊಳ್ಳುತ್ತೇವೆ. ಇಷ್ಟೆಲ್ಲ ಹೇಳುವಾಗ ನನಗೆ ಎಲ್ಲಿಲ್ಲದ ಖುಷಿ ಆಯಿತು.

ಮೇಡಂಜೀ, ಈಗ ನಾವು ವಾಹನಗಳನ್ನೂ ಖರೀದಿ ಮಾಡಿದ್ದೇವೆ. ಹೆಚ್ಚಿನ ಸಂಖ್ಯೆಯಲ್ಲಿ ಕುರಿಗಳನ್ನು ಖರೀದಿಸಿ ಒಳ್ಳೆಯ ಸಂಪಾದನೆಯನ್ನು ಮಾಡುತ್ತಿದ್ದೇವೆ ಎಂದು ಹೇಳುವಾಗ ಮುಗ್ಧ ಮನಸ್ಸಿನ ವಿದ್ಯಾರ್ಥಿಯ ಸಾಧನೆ ಕೇಳಿ ತುಂಬಾ ಆನಂದ ಆಯಿತು.. ಇಷ್ಟೆಲ್ಲ ಕೇಳಿದ ಮೇಲೆ ನನ್ನ ವಿದ್ಯಾರ್ಥಿ ಜೊತೆ ಕೆಲವೊಂದು ವಿಚಾರ ಹಂಚಿಕೊಂಡೆ. ನೋಡಿ ಶಿಕ್ಷಣ ನಮಗೆ ಪ್ರಪಂಚದ ಜೊತೆ ವ್ಯವಹಾರ ಮಾಡಲು ಹಾಗೂ ಜ್ಞಾನಾರ್ಜನೆಗೆ ಬೇಕು.

100ಕ್ಕೆ ಶೇಕಡಾ 99 ಜನರು ಶಿಕ್ಷಣವನ್ನು ಉದ್ಯೋಗಕ್ಕಾಗಿ ನೌಕರಿಗಾಗಿ ಎನ್ನುವ ಮನೋಧೋರಣೆಯಿಂದ ಓದುತ್ತಿದ್ದು, ಶಿಕ್ಷಣ ಮುಗಿಸಿದ ನಂತರ ಸರಕಾರಿ ಉದ್ಯೋಗದ ನಿರೀಕ್ಷೆಯಲ್ಲಿ ಅರ್ಧ ಜೀವನ ವ್ಯರ್ಥ ಮಾಡಿಕೊಳ್ಳಬಾರದು. ಸುಮ್ಮನೆ ಕಾಲ ವ್ಯರ್ಥ ಮಾಡಿಕೊಂಡು ದೇಶದಲ್ಲಿ ನಿರುದ್ಯೋಗ ಸಮಸ್ಯೆ ಹೆಚ್ಚಿಗೆ ಮಾಡುವ ಕಾರ್ಯಕ್ಕೆ ಕೈ ಹಾಕಬಾರದು . ಮಾನವ ಸಂಪನ್ಮೂಲ ವ್ಯರ್ಥ ಮಾಡಿಕೊಂಡು ನಿರುತ್ಸಾಹ ಜೀವನ ಮಾಡುತ್ತಿರುವುದು ಎಷ್ಟರ ಮಟ್ಟಿಗೆ ಸರಿ? ಕಾಯಕವೇ ಕೈಲಾಸ.. ಎನ್ನುವಂತೆ ಕೆಲಸ ಮಾಡಲು ಸಿದ್ಧನಿರುವ ವ್ಯಕ್ತಿಗೆ ನೂರಾರು ಉದ್ಯೋಗಗಳಿದ್ದಾವೆ..

ಅದರಲ್ಲೂ ಇತ್ತೀಚಿನ ದಿನಗಳಲ್ಲಿ ಈಗಿನ ಯುವಕರ ಕೂಗು ಕೂಡ ಒಂದೇ ವಿವಿಧ ಕ್ಷೇತ್ರಗಳಲ್ಲಿ ಉದ್ಯೋಗ ಕಲ್ಪಿಸುವ ವ್ಯವಸ್ಥೆ ಯಾವ ಸರಕಾರದ ಅಜೆಂಡಾದಲ್ಲಿ ಇರುತ್ತದೋ ಆ ಸರಕಾರದ ಮೇಲೆ ನಿರೀಕ್ಷೆ ಇಟ್ಟು ಮತದಾನ ಮಾಡುವಷ್ಟು ಯೋಚನೆ ಮಾಡಿ, ಇಂದಿನ ಯುವ ಜನಾಂಗ ತಮ್ಮ ಶಿಕ್ಷಣ, ಶ್ರಮ ಹಾಗೂ ಕಾಲವನ್ನು ವ್ಯರ್ಥ ಮಾಡಿಕೊಳ್ಳುತ್ತಿರುವುದು ದುಃಖದ ಸಂಗತಿ. ಶ್ರದ್ಧೆ, ಭಕ್ತಿ, ಸ್ವಪ್ರಯತ್ನ, ಪರಿಶ್ರಮದಿಂದ ಯಾವ ಉದ್ಯೋಗವನ್ನಾದರೂ ಮಾಡಲು ಮುಂದುವರೆದಿದ್ದೆ ಯಾದರೆ ನಿಜವಾದ ಮಾನವ ಸಂಪನ್ಮೂಲದ ಉಪಯೋಗವಾಗಿ ದೇಶದ ಪ್ರಗತಿ ಖಂಡಿತ ಸಾಧ್ಯ.....

ಇಷ್ಟೆಲ್ಲ ನನ್ನ ಮಾತುಗಳನ್ನು ಆಲಿಸಿದ ಅವನು, ಮುಂದಿನ ದಿನಗಳಲ್ಲಿ ನಾನು ಇನ್ನೂ ಅನೇಕ ಸಾಧನೆ ಮಾಡುವೆ ಎನ್ನುವ ಮಾತು ಹೇಳಿದ. ನನ್ನ ಊರು ಬಂದಾಗ ನಾನು ಇಳಿದುಕೊಂಡೆ. ಅವನು ಪ್ರೀತಿಯಿಂದ ನನ್ನ ಕಾಲು ಮುಟ್ಟಿ ನಮಸ್ಕಾರ ಮಾಡಿದ.. ನನ್ನ ವಿದ್ಯಾರ್ಥಿ ನನ್ನ ಮಗ ಇದ್ದ ಹಾಗೆ, ಅವನಿಗೆ ಆಶೀರ್ವಾದ ಮಾಡಿ ಮುಂದೆ ಹೊರಟೆ.

ಏಳಿ ಎದ್ದೇಳಿ, ಗುರಿ ಮುಟ್ಟುವ ತನಕ ನಿಲ್ಲದಿರಿ..' ಎಂಬ ಮಾತನ್ನು ಹೇಳಿ ಅದು ಯುವಜನರ ಮನದಲ್ಲಿ ಗಟ್ಟಿಯಾಗಿ ನೆಲೆಯೂರುವಂತೆ ಮಾಡಿದ ಮಹಾನ್ ವ್ಯಕ್ತಿ ಸ್ವಾಮಿ ವಿವೇಕಾನಂದರು. ಮನದ ಸೋಂಬೇರಿತನವನ್ನು ಬಡಿದೆಚ್ಚರಿಸುವ ಅವರ ನುಡಿಮುತ್ತುಗಳು ಸದಾ ಕಾಲಕ್ಕೂ ಸ್ಫೂರ್ತಿ ನೀಡುವಂಥದ್ದು. ನನ್ನ ವಿದ್ಯಾರ್ಥಿಯ ಈ ಕಾರ್ಯ ವಿವೇಕಾನಂದರ ಈ ಮಾತನ್ನು ನೆನಪಿಸಿತು. ವಿವೇಕಾನಂದರ ಜಯಂತಿಯಾದ ಇಂದಿನ ದಿನವನ್ನು 'ರಾಷ್ಟ್ರೀಯ ಯುವ ದಿನ' ಎಂದು ಆಚರಿಸುತ್ತಾರೆ.

ಸಾಧ್ಯವೇ ಇಲ್ಲ ಎಂದುಕೊಂಡರೆ ಏನನ್ನೂ ಸಾಧಿಸಲಾಗದು. ಪ್ರಯತ್ನಿಸುವುದರಿಂದ ನಷ್ಟವೇನಿದೆ? ಗೆದ್ದರೆ ಸಂತೋಷ, ಸೋತರೆ ಅನುಭವ ಎಂಬ ವಿವೇಕಾನಂದರ ಮಾತು ನನ್ನ ವಿದ್ಯಾರ್ಥಿಯ ಬದುಕಿನಲ್ಲಿ ನಿಜವಾಗಿದೆ.

ಜೀವ ನಮ್ಮ ಮಾತನ್ನು ಕೇಳುವುದಿಲ್ಲ, ಯಾವಾಗ ಬೇಕಾದರೂ ಹೋಗಬಹುದು. ಜೀವನ ನಮ್ಮ ಮಾತನ್ನು ಕೇಳುತ್ತದೆ, ಹೇಗೆ ಬೇಕಾದರೂ ರೂಪಿಸಿಕೊಳ್ಳಬಹುದು ಎಂಬುದನ್ನು ಇವತ್ತಿನ ಯುವ ಜನತೆ ಅರಿಯಬೇಕು. ವಿವೇಕಾನಂದರ ಜಯಂತಿ ಸಂದರ್ಭದಲ್ಲಿ ನಾವು ನಮ್ಮ ಮುಂದಿನ ಇಂದಿನ ಪೀಳಿಗೆಗೆ ನೈಜವಾದ ಉದಾಹರಣೆಗಳನ್ನು ನೀಡುವ ಮೂಲಕ ಅವರ ಬದುಕನ್ನು ರೂಪಿಸಿಕೊಂಡ ಇಂತಹ ಅನೇಕ ಪ್ರತಿಭೆಗಳನ್ನು ಪರಿಚಯಿಸುವ ಜೊತೆಗೆ ವಿವೇಕಾನಂದರ ಆದರ್ಶಗಳನ್ನು ತಿಳಿಸಿದರೆ ಸಾರ್ಥಕ

**– ನಂದಿನಿ ಸನಬಾಲ**
ಶಿಕ್ಷಕಿ ಗುಲ್ಬರ್ಗಾ

# ಹಂಪಿಯಲ್ಲಿ ಶ್ರೀಗಂಧ ಮರ ಕದ್ದ ಆರೋಪಿಗಳು ಅಂದರ್

**ಹಂಪಿ ಪ್ರವಾಸಿ ಠಾಣೆ ಪೋಲೀಸರು ಕಾರ್ಯಾಚರಣೆ | ನಾಲ್ವರ ಬಂಧನ | 2ಕೆಜಿ ಶ್ರೀಗಂಧ, ನಗದು ವಶ**



**ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿ ಕಮಲ ಮಹಲ್ ಆವರಣದಲ್ಲಿ ಗಂಧದ ಮರ ಕಡಿದು ಕದ್ದು ಪರಾರಿಯಾಗಿದ್ದ ಕಳ್ಳತನ ಪ್ರಕರಣದಲ್ಲಿ ಹಂಪಿ ಪ್ರವಾಸಿ ಠಾಣೆ ಪೋಲೀಸರು ನಾಲ್ವರನ್ನು ಆರೋಪಿಗಳನ್ನು ಬಂಧಿಸಿ 2ಕೆಜಿ ಶ್ರೀಗಂಧದ ಮರದ ಕಟ್ಟಿಗೆ ಸಹಿತ ಬೆಲೆ ಬಾಳುವ ವಸ್ತುಗಳನ್ನು ವಶಕ್ಕೆ ಪಡೆದಿದ್ದಾರೆ.

ನವೆಂಬರ್ 24, 2023 ರಂದು ಕಮಲ್ ಮಹಲ್ ಆವರಣದ ಟ್ರಜರಿ ಕಟ್ಟಡದ ಮುಂಭಾಗದಲ್ಲಿ, ಶ್ರೀಗಂಧದ ಮರವನ್ನು ಕಡಿದು ಕಳ್ಳತನ ಮಾಡಿದ್ದರ ಕುರಿತು ಪ್ರಕರಣ ದಾಖಲಿಸಿಕೊಂಡಿದ್ದರು. ಒಂದೂವರೆ ತಿಂಗಳಲ್ಲಿ ಆರೋಪಿತ ಕಳ್ಳರನ್ನು ಪತ್ತೆ ಮಾಡಿ, ಅವರಿಂದ ನಗದು ಹಣ 6000/– ರೂ, ಅಂದಾಜು ರೂ. 3,00,000/– ಬೆಲೆ ಬಾಳುವ 01 ಬೊಲೆರೋ ಜೀಪ್, ಅಂದಾಜು ರೂ. 62,000/– ಬೆಲೆ ಬಾಳುವ 02 ಮೋಟರ್ ಸೈಕಲ್ ಗಳನ್ನು ಮತ್ತು 03 ಆಂಡ್ರಾಯ್ಡ್ ಮೊಬೈಲ್ ಫೋನ್‌ಗಳು ಮತ್ತು 2 ಕೆಜಿ ತೂಕವಿರುವ ಶ್ರೀಗಂಧ ಮರದ ಕಟ್ಟಿಗೆ ತುಂಡನ್ನು ವಶಪಡಿಸಿಪಡಿಸಿಕೊಂಡಿದ್ದಾರೆ.

ಹೊಸಪೇಟೆ ಆಶ್ರಯ ಕಾಲೋನಿ ಗಾಳೆಪ್ಪ, ಈಶ್ವರ ನಗರದ ಕೆ.ಲೋಕೇಶ, ಜಂಬುನಾಥ ರಸ್ತೆ ದೋಳ್‌ಪೇಟೆಯ ಲಕ್ಷ್ಮಣ ಹಾಗೂ ಸಿರಸನಕಲ್ಲು ಪ್ರದೇಶದ ಹುಲುಗಪ್ಪ ಎಂಬ ನಾಲ್ವರು ಆರೋಪಿಗಳನ್ನು ಬಂಧಿಸಲಾಗಿದೆ.

ವಿಜಯನಗರ ಜಿಲ್ಲಾ ಎಸ್ಪಿ ಶ್ರೀಹರಿಬಾಬು, ಹೆಚ್ಚುವರಿ ಎಸ್ಪಿ ಸಲೀಂ ಪಾಷ, ಡಿವೈಎಸ್ಪಿ ಡಾ.ಟಿ.ಮಂಜುನಾಥ ಮತ್ತು ಹಂಪಿ ವೃತ್ತ ಸಿಪಿಐ ಶಿವರಾಜ್ ಎಸ್ ಇಂಗಳೆ ಅವರ ಮಾರ್ಗದರ್ಶನದಲ್ಲಿ ಪೊಲೀಸರು ಕಾರ್ಯಾಚರಣೆ ನಡೆಸಿದ್ದರು. ಹಂಪಿ ಪೊಲೀಸ್ ಠಾಣೆ ಪಿಎಸ್‌ಐ ಶಿವಕುಮಾರ್ ನಾಯ್ಕ ನೇತೃತ್ವದಲ್ಲಿ ಪೊಲೀಸರಾದ ಸಂಜೀವ್‌ಸಿಂಗ್, ಶರಣಪ್ಪ, ಸಿ.ಡಿ.ಆರ್. ಘಟಕದ ಸಿಬ್ಬಂದಿ ಕುಮಾರ್ ನಾಯ್ಕರನ್ನೊಳಗೊಂಡ ತಂಡ ಆರೋಪಿಗಳನ್ನು ಪತ್ತೆ ಹಚ್ಚಿಸಿದ್ದಾರೆ. ಪೊಲೀಸರ ಕಾರ್ಯಕ್ಕೆ ಮೇಲಾಧಿಕಾರಿಗಳು ಶ್ಲಾಘಿಸಿದ್ದಾರೆ.

# ಮಕ್ಕಳಲ್ಲಿ ಪರಿಸರ ಪ್ರಜ್ಞೆ ಹೆಚ್ಚಲಿ

## ರೋವರ್ ಮತ್ತು ರೇಂಜರ್‌ಗಳಿಗೆ ದೀಕ್ಷಾ



**ಹಂಪಿ ಟೈಮ್ಸ್ ಕೂಡ್ಲಿಗಿ**

ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಕರ್ನಾಟಕ ರಾಜ್ಯ ಸ್ಕೌಟ್ ಮತ್ತು ಗೈಡ್ ವಿಭಾಗದ ಮಹಾತ್ಮ ಗಾಂಧೀಜಿ ರೋವರ್ ಮತ್ತು ರೇಂಜರ್ಸ್ ಘಟಕದ ವತಿಯಿಂದ ವಿವಿಧ ರೋವರ್ ಮತ್ತು ರೇಂಜರ್ ಗಳಿಗೆ ದೀಕ್ಷಾ ಸಮಾರಂಭ ಕಾರ್ಯಕ್ರಮ ಜರುಗಿತು.

ಸಪಪೂ ಕಾಲೇಜಿನ ಪ್ರಾಚಾರ್ಯೆ ಟಿ.ಕೊಟ್ರಮ್ಮ ಚಕ್ರಪಾಣಿ ಮಾತನಾಡಿ, ವಿದ್ಯಾರ್ಥಿಗಳಿಗೆ ಸಮಾಜ ಸೇವೆ ಮತ್ತು ರಾಷ್ಟ್ರೀಯ ಐಕ್ಯತೆಗಾಗಿ ಶ್ರಮಿಸಲು ಸ್ಕೌಟ್ ಮತ್ತು ಗೈಡ್ ಸಹಕಾರಿಯಾಗಲಿದೆ ಎಂದರು. ಸ್ಕೌಟ್ ಮತ್ತು ಗೈಡ್ಸ್ ನ ಪ್ರಮುಖ ಉದ್ದೇಶವೇ ಮಕ್ಕಳನ್ನು ಸ್ವಾವಲಂಬಿಯಾಗಿ ಮಾಡುವುದು ನಾಯಕತ್ವ ಗುಣಗಳನ್ನ ಬೆಳಸುವ ಜತೆಗೆ ಕ್ರಿಯಾಶೀಲರನ್ನಾಗಿ ಮಾಡುವಲ್ಲಿ ಹಾಗೂ ವಿದ್ಯಾರ್ಥಿಯ ವ್ಯಕ್ತಿತ್ವ ವಿಕಸನ ಹಾಗೂ ಕಲಿಕೆಯಲ್ಲೂ ಪ್ರಗತಿ ಸಾಧಿಸಲು ಸಾಧ್ಯ ಎಂದು ತಿಳಿಸಿದರು. ಸ್ಕೌಟ್ಸ್ ಮತ್ತು ಗೈಡ್ಸ್‌ನಿಂದ ಮಕ್ಕಳಲ್ಲಿ ಪರಿಸರ ಪ್ರಜ್ಞೆ, ಸಂಸ್ಕೃತಿಯ ಅರಿವನ್ನು ಮೂಡಿಸುವ ಕೆಲಸ ಹೆಚ್ಚಾಗಬೇಕು. ಪರಿಸರ ಜಾಗೃತಿ, ಸ್ವಚ್ಛತೆ ಅತ್ಯಂತ ಮಹತ್ವದ್ದು, ಪರಿಸರ ಉಳಿಸಿ–ಬೆಳೆಸುವ ಕಾರ್ಯವನ್ನು ವಿದ್ಯಾರ್ಥಿಗಳಲ್ಲಿ ತುಂಬಬೇಕು ಎಂದರು. ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷ ಉದಯಜನ್ನು, ಸ್ಕೌಟ್ ಮತ್ತು ಗೈಡ್ಸ್ ತಾಲೂಕು ಕಾರ್ಯದರ್ಶಿ ಟಿ.ತಿಂದಪ್ಪ, ರೋವರ್ ಗೈಡ್ ಲೀಡರ್ ಹೆಗ್ಗಪ್ಪ ಹಳ್ಳಿ, ರೇಂಜರ್ಸ್ ಗೈಡ್ ಲೀಡರ್ ಸುಮಾ, ಉಪನ್ಯಾಸಕ ಗೌಡ್ರು ಬಸವರಾಜ ಸೇರಿದಂತೆ ವಿಧ್ಯಾರ್ಥಿಗಳು ಭಾಗಿಯಾಗಿದ್ದರು.

# ಕ್ರೀಡೆಗಳಿಂದ ಮೈ ಮನಗಳಿಗೆ ಉಲ್ಲಾಸ



**ಹಂಪಿ ಟೈಮ್ಸ್ ಕೂಡ್ಲಿಗಿ:**

ಕ್ರೀಡೆಗಳಿಂದ ಮೈ, ಮನಸ್ಸುಗಳಿಗೆ ಅಗತ್ಯ ವ್ಯಾಯಾಮ ದೊರೆಯುತ್ತದೆ ಎಂದು ವೃತ್ತ ಆರಕ್ಷಕ ನಿರೀಕ್ಷಕ ತಳವಾರ ಸುರೇಶ್ ಹೇಳಿದರು.

ಪಟ್ಟಣದ ಮಹಾದೇವ ಮೈಲಾರ ಕ್ರೀಡಾಂಗಣದಲ್ಲಿ ಶನಿವಾರ ಕೂಡ್ಲಿಗಿ ಉಪ ವಾಲಿಬಾಲ್ ಅಸೋಸಿಯೇಷನ್ ಇವರ ಆಶ್ರಯದಲ್ಲಿ ಅಲ್–ಟೆಕ್ ಇವರ ಪ್ರಾಯೋಜಿತ ರಾಜ್ಯ ಮಟ್ಟದ ವಾಲಿಬಾಲ್ ಹೊನಲು, ಬೆಳಕಿನ ಪಂದ್ಯಾವಳಿಗಳಿಗೆ ಚಾಲನೆ ನೀಡಿ ಮಾತನಾಡಿದರು. ಕ್ರೀಡೆಗಳಲ್ಲಿ ಸೋಲು, ಗೆಲುವ ಸಾಮಾನ್ಯ ಇದನ್ನು ಕ್ರೀಡಾ ಮನೋಭಾವದಿಂದ ಸ್ವೀಕರಿಸಬೇಕು. ಅಲ್ಲದೆ, ಕ್ರೀಡೆಯಿಂದ ಪ್ರತಿಸ್ಪರ್ಧಿಗಳ ಹೃದಯವನ್ನು ಗೆಲ್ಲುವಂತಾಗಬೇಕು. ಇದರಿಂದ ಪರಸ್ಪರ ಸ್ನೇಹ, ಬಾಂಧವ್ಯಗಳು ವೃದ್ಧಿಸುತ್ತೇವೆ ಎಂದರು.

ಕಬ್ಬಡಿ ಹಾಗೂ ವಾಲಿಬಾಲ್ ಪಂಧ್ಯಗಳಲ್ಲಿ ನಿರ್ಣಯಗಳು, ತೀರ್ಪುಗಳು ಸ್ವಲ್ಪ ಕ್ಲಿಷ್ಟಕರವೆಂದು ಹೇಳುತ್ತಾರೆ ಆದರೆ ತೀರ್ಪುಗಾರರು ನ್ಯಾಯಯುತ ತೀರ್ಪು ನೀಡಬೇಕು. ರಾಜ್ಯದ್ಯಾಂತ ಹಲವು ಅನೇಕ ತಂಡಗಳು ಸ್ಪರ್ಧೆಗೆ ಬಂದಿವೆ ಎಲ್ಲಾರೂ ಕ್ರೀಡಾ ಮನೋಭಾವದಿಂದ ಆಟವಾಡಿ ಎಂದು ಹಾರೈಸಿದರು.

ರಾಜ್ಯ ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಪಾಲ್ತೂರ್ ಶಿವರಾಜ್, ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲಾ ಉಪ ಪ್ರಾಚಾರ್ಯ ಹುಲಿಕೇರಿ ಬಸವರಾಜಪ್ಪ, ಉಪನ್ಯಾಸಕ ಇಮಾಮ್ ಸಾಹೇಬ್,ಅಲ್ ಟೆಕ್ ನ ಇಬ್ರಾಹಿಂ ಅಲಿ, ಷಣ್ಮುಖಪ್ಪ, ಹೆಚ್.ಡಿ. ಉಡುಚಪ್ಪ, ಭಾಸ್ಕರ್‌ನಾಯ್ಕ್, ಕೂಡ್ಲಿಗಿ ವಾಲಿಬಾಲ್ ಅಸೋಸಿಯೇಷನ್ ನ ವೆಂಕಟೇಶ್, ಕುಮಾರಸ್ವಾಮಿ, ಇಸ್ಮಾಯಿಲ್, ದಾದು ಇದ್ದರು. ಸ್ಪರ್ಧೆಯಲ್ಲಿ ರಾಜ್ಯದ 15ಕ್ಕೂ ಹೆಚ್ಚು ತಂಡಗಳು ಭಾಗವಹಿಸಿದ್ದವು.

# ದುರಸ್ತಿ ಕಾಣದ ನಗರದ ಹಂಪಿ ರಸ್ತೆ ಪ್ರಯಾಣಿಕರ ಪ್ರಾಣದ ಜೊತೆ ಚೆಲ್ಲಾಟ

**ಹಂಪಿ ಉತ್ಸವಕ್ಕೆ ದಿನಗಣನೆ ಆರಂಭವಾಗಿದೆ, ವಿಜಯನಗರ ಜಿಲ್ಲಾ ಕೇಂದ್ರದಲ್ಲಿ ಜನಪ್ರತಿನಿಧಿಗಳು, ಅಧಿಕಾರಿಗಳು ಇದ್ದಾರೆಯೇ? ಎಂಬ ಪ್ರಶ್ನೆ ಜನತೆಗೆ ಕಾಡುತ್ತಿದ್ದು, ಇನ್ಯಾವಾಗ ದುರಸ್ತಿ ಎನ್ನುತ್ತಿದ್ದಾರೆ ಪ್ರಯಾಣಿಕರು..**









## ಕವಿ ಮನಸು

### ಅಪ್ಪ

ಮರಕ್ಕೆ ಆಧಾರವಾಗಿ ಇರುವ ಬೇರು
ಹೇಗೆ ಹೊರ ಜಗತ್ತಿಗೆ ಕಾಣುವುದಿಲ್ಲವೋ.
ಹಾಗೆಯೇ ತಂದೆ ತನ್ನ ಕುಟುಂಬದ ಬಗ್ಗೆ
ಕಾಳಜಿ ವಹಿಸುವ ಪರಿ ಮಕ್ಕಳು ಅರಿಯರೋ.

ಮೈ ತುಂಬಾ ಮುಳ್ಳಿದ್ದರು
ಹಲಸಿನ ಹಣ್ಣಿನ ಒಳಗಿನ ರುಚಿಯಂತೆ.
ಮೇಲ್ನೋಟಕ್ಕೆ ಗಡಸು ಸ್ವಭಾವ ಎನಿಸಿದ್ದರು
ಮನಸ್ಸು ಮಾತ್ರ ಮಕ್ಕಳ ಪ್ರೀತಿಯಲ್ಲಿ ಕರಗುವ
ಬೆಣ್ಣೆಯಂತೆ.

'ನಾ ಕಾಣದ ಪ್ರಪಂಚ, ನೀ ಕಾಣ ಬೇಕು'
ಎಂಬ ಅಪ್ಪನ ಮನಸ್ಸಿನ ಮಾತು
ಅರಿತುಕೊಳ್ಳಲು.
ತಂದೆಯಾಗಿ ಆತ ನಮಗಾಗಿ ಮಾಡಿದ
ತ್ಯಾಗವನ್ನು ತಿಳಿಯಲು.

ಮಗನು ತಂದೆಯಾದರಷ್ಟೇ ಸಾಧ್ಯ....

**– ಮಂಜುಶ್ರೀ ಮುರಳೀಧರ್.**
**ತೋರಣಗಲ್ಲು, ಬಳ್ಳಾರಿ.**

### ಹಣ...

ಹಣವೆಂಬುದು ನಿನ್ನೆ ಮೊನ್ನೆಯದಲ್ಲ
ಉಂಟು ಇದಕ್ಕೆ ಪ್ರಾಚೀನ ಇತಿಹಾಸ!
ಸಾಮ್ರಾಜ್ಯಗಳನ್ನುರುಳಿಸಿ ರಕ್ತದೊಳು
ಮಿಂದು ಬೀರುತಿಹುದು ಮಂದಹಾಸ!!

ಭಿನ್ನರೂಪವ ತಾಳಿ ಯುಗಯುಗದಿ
ಜಗದಜನರ ಮಧ್ಯ ಚಲಿಸಿ ಬೀಗಿದೆ!
ದುರಾಸೆ ಕಿಡಿಯ ಕಿಚ್ಚುಮನದಿ ಹಚ್ಚಿ
ವಿಷದ ಹೊಗೆಯ ವಿಶ್ವಕೆಲ್ಲ ಬೀರಿದೆ!!

ಕಾಂಚಾಣ ಕನ್ಯೆಯನು ಮೋಹಿಸಿ
ಅದರ ತುಳಿತಕ್ಕಾದರೆಲ್ಲಾರು ಬಲಿ!
ಹಣದ ಜಾಲಕ್ಕೆ ಸಿಲುಕದೆಯೆ ಸದಾ
ಸುಖದಿ ಬದುಕುವುದನು ನೀ ಕಲಿ!!

ಜೀವಿಸಲು ಹಣವು ಬೇಕು ನಮಗೆ
ಅದೇ ಸರ್ವಸ್ವವೆಂಬುದು ಮಾತ್ರ ಭ್ರಮೆ!
ಹಣಕ್ಕಿಂತಲೂ ಮಿಗಿಲಾದವು ಬಹಳ
ಇಹವು ಅವೇ ನಮ್ಮಯ ಜೀವ ವಿಮೆ!!

ನಮ್ಮ ಮತಿಗೆ ಮನಕೆ ಶೃತಿ ಹೊಂದಲು
ನಿಯಂತ್ರಣದೊಳು,ನಮ್ಮ ಬಾಳು!
ದುಡ್ಡಿನ ತಾಳಕ್ಕೆ ನಾವು ಕುಣಿಯಲು
ಹಸಿವಿಗೆ ತುತ್ತಾಗದ ಅಕ್ಕಿಯ ಕಾಳು!!

ಮಾನವೀಯ ಸಂಬಂಧಗಳಮುಂದೆ
ಸಂಪನ್ನತೆಯ ಹಣವು ಸಮ ತೃಣಕೆ!
ಹಣಕ್ಕಿಂತ ಗುಣಕ್ಕೆ ಮಹತ್ವವ ನೀಡೋ
ಮನುಕುಲ ಸದಾ ದಿವ್ಯ ದೈವ ಗಣಕೆ!!

**– ಶಿವರಾಜ್ ವಿ.**
ಸಹ ಶಿಕ್ಷಕರು. ಹೊಸಪೇಟೆ.

## ತುಂಗಭದ್ರಾ ನೀರಿನ ಮಟ್ಟ



| ಶನಿವಾರ : 13-01-2024 | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1588.96 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 00 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 10.182ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

| ಕಳೆದ ವರ್ಷ ಇದೇ ದಿನ | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1621.71 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 5876 ಕ್ಯುಸೆಕ್ |
| ಸಾಮರ್ಥ್ಯ | 66.256 ಟಿಎಂಸಿ |

### ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA





**ಮೈಕ್ರೋ ನ್ಯೂಸ್**

## 3 ತಿಂಗಳು ಕಳೆದರು ವಿಎಸ್‌ಎಸ್‌ಎನ್ ಸೊಸೈಟಿಯಲ್ಲಿ ದೊರೆ-ಯದ ರಿನಿವಲ್ ಭಾಗ್ಯ

**ಹಂಪಿ ಟೈಮ್ಸ್ ಕೊಟ್ಟೂರು**

ಪಟ್ಟಣದ ಎಪಿಎಂಸಿ ಆವರಣದಲ್ಲಿರುವ ವಿಎಸ್‌ಎಸ್‌ಎನ್ ಸೊಸೈಟಿಯಲ್ಲಿ 3 ತಿಂಗಳು ಕಳೆದರು ಅಲ್ಲಿನ ವ್ಯವಸ್ಥಾಪಕರು ಸಾಲವನ್ನು 'ರಿನಿವಲ್'' ಮಾಡದೆ ಆರ್ಥಿಕ ಸಂಕಷ್ಟಕ್ಕೆ ದೂಡಿದ್ದಾರೆ ಎಂಬುದು ಅರ್ಹ ಪಲಾನುಭವಿಗಳ ಆರೋಪ. ಅರ್ಹ ಪಲಾನುಭವಿ ಒಬ್ಬರು ಪತ್ರಿಕೆಯೊಂದಿಗೆ ಮಾತನಾಡಿ, ಎಪಿಎಂಸಿ ಯಲ್ಲಿನ ವಿಎಸ್‌ಎಸ್‌ಎನ್ ಸೊಸೈಟಿಯಲ್ಲಿ ಸಾಲ ಪಡೆದು ನಿಗದಿತ ಅವಧಿಯೊಳಗೆ ಹಣ ಜಮ ಮಾಡಿ, 'ರಿನಿವಲ್''ಗೆ ಕೋರಿ 3 ತಿಂಗಳು ಕಳೆದಿವೆ ವ್ಯವಸ್ಥಾಪಕರು ಮಾತ್ರ ಈ ವಾರ, ಮುಂದಿನ ವಾರ ಎಂದು ದಿನಗಳನ್ನು ಮುಂದೂಡುತ್ತಲಿದ್ದಾರೆ. ರಿನಿವಲ್ ಮಾತ್ರ ಮಾಡುತ್ತಿಲ್ಲ ಎಂದು ಆರೋಪಿಸಿದರು. ರಿನಿವಲ್ ಮಾಡದ ಹಿನ್ನೆಲೆ ಬೆರೆವರಿಂದ ಪಡೆದ ಹಣವನ್ನು ಹಿಂದಿರುಗಿಸಲು ಇದ್ದೊಂದು ಮನೆಯನ್ನು ಅಡವಿಡಬೇಕಾದ ಪರಿಸ್ಥಿತಿ ಎದುರಾಗಿದೆ ಇಲ್ಲಿನ ವ್ಯವಸ್ಥಾಪಕರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

'ರಿನಿವಲ್''ನ್ನು 3 ತಿಂಗಳು ಕಾಲ ವಿಳಂಬ ಮಾಡಿಲ್ಲ. ಕೆಲಸದ ಒತ್ತಡದಿಂದ 1 ಅಥವಾ 2 ತಿಂಗಳು ಆಗಿರಬಹುದು, 4–5 ದಿನಗಳಲ್ಲಿ ರಿನಿವಲ್ ಮಾಡಿ ಕೊಡುವೆ ಎಂದು ವಿಎಸ್‌ಎಸ್‌ಎನ್ ಸೊಸೈಟಿ ವ್ಯವಸ್ಥಾಪಕ ಶ್ರೀಧರ್ ಪತ್ರಿಕೆಗೆ ಪ್ರತಿಕ್ರಿಯಿಸಿದ್ದಾರೆ.

# ಶರಣ ಎಂದರೆ ಜಾತಿ-ವರ್ಗ ಇಲ್ಲದ್ದು

### ಸಿ.ಎಂ ಸಿದ್ದರಾಮಯ್ಯ ಹೇಳಿಕೆ | ಬಸವಾದಿ ಶರಣರ ಆಶಯದ ಜಾತಿ ರಹಿತ ಸಮಾಜ ನಿರ್ಮಾಣ ಶರಣರಿಂದ ಸಾಧ್ಯ

**ಹಂಪಿ ಟೈಮ್ಸ್ ಕೂಡಲ ಸಂಗಮ**

ಬಸವಾದಿ ಶರಣರ ಆಶಯದ ಜಾತಿ ರಹಿತ ಸಮಾಜ ನಿರ್ಮಾಣ ಶರಣರಿಂದ ಸಾಧ್ಯ. ಶರಣ ಎಂದರೆ ಜಾತಿ–ವರ್ಗ ಇಲ್ಲದ್ದು. ಶರಣ ಮೇಳ ಎಂದರೆ ಜಾತಿಯಿಂದ ಮುಕ್ತರಾದ ಮನುಷ್ಯರ ಮೇಳ ಎಂದು ಸಿ.ಎಂ ಸಿದ್ದರಾಮಯ್ಯ ಅವರು ನುಡಿದರು.

ಲಿಂಗಾಯತ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ಕೂಡಲ ಸಂಗಮದಲ್ಲಿ ಆಯೋಜಿಸಿದ್ದ 37 ನೇ ಶರಣ ಮೇಳವನ್ನು ಉದ್ಘಾಟಿಸಿ ಮಾತನಾಡಿದರು.




ಬಸವಾದಿ ಶರಣರು 12 ನೇ ಶತಮಾನದಲ್ಲಿ ಸಾಮಾಜಿಕ ಕ್ರಾಂತಿ ಮಾಡಿದರು. ನಮ್ಮ ಚಲನೆ ರಹಿತ ಜಾತಿ ವ್ಯವಸ್ಥೆಯ ಸಾಮಾಜಿಕ ವ್ಯವಸ್ಥೆಯನ್ನು ಪಟ್ಟಭದ್ರ ಹಿತಾಸಕ್ತಿಗಳು ರೂಪಿಸಿದರು. ಇದನ್ನು ಮಾಡಿದ್ದು ದೇವರಲ್ಲ ಎಂದು ನುಡಿದರು.

ಬಹು ಸಂಖ್ಯಾತರನ್ನು ಶಿಕ್ಷಣದಿಂದ ದೂರ ಇಡಲು ಅಸಮಾನತೆಯಿಂದ ಕೂಡಿದ ಚಾತುವರ್ಣ ವ್ಯವಸ್ಥೆಯನ್ನು ಮಾಡಿದರು. ಬಸವಾದಿ ಶರಣರ ವಚನ ಚಳವಳಿ ತಾರತಮ್ಯದಿಂದ ಕೂಡಿದ ಕರ್ಮ ಸಿದ್ಧಾಂತವನ್ನು, ಮೌಢ್ಯವನ್ನು ತೊಡೆದು ಹಾಕಿತು. ಹಣೆ ಬರಹ ಮತ್ತು ಕರ್ಮ ಸಿದ್ಧಾಂತವನ್ನು, ಹಿಂದಿನ ಜನ್ಮ–ಮುಂದಿನ ಜನ್ಮ ಎನ್ನುವುದನ್ನು ಬಸವಣ್ಣನವರು ಸಂಪೂರ್ಣ ತಿರಸ್ಕರಿಸಿದರು.

ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದರೆ ನರಕ ಎಂದು ಬಸವಾದಿ ಶರಣರು ಪ್ರತಿಪಾದಿಸಿದರು. ಧರ್ಮ ತಾರತಮ್ಯ ಮಾಡಬೇಡಿ, ಮನುಷ್ಯ ಮನುಷ್ಯನನ್ನು ದ್ವೇಷಿಸುವುದನ್ನು ಬಸವಾದಿ ಶರಣರು ವಿರೋಧಿಸಿದ್ದರು. ಈ ಕಾರಣಕ್ಕೇ ಇವ ನಮ್ಮವ, ಇವ ನಮ್ಮವ ಎನ್ನುವ ಉದಾತ್ತವಾದ ಮೌಲ್ಯವನ್ನು 800 ವರ್ಷಗಳ ಹಿಂದೆಯೇ ಹೇಳಿದರು. ಹೀಗಾಗಿ ಜಾತಿ ವ್ಯವಸ್ಥೆಯನ್ನು ಶರಣರೇ ಹೋಗಲಾಡಿಸಬೇಕು ಎಂದರು.

ಜಾತಿ ಕಾರಣಕ್ಕೆ ಹಿಂದುಳಿದಿರುವ ಸಮುದಾಯಗಳಿಗೆ ಆರ್ಥಿಕ ಶಕ್ತಿ ನೀಡಬೇಕು. ಜಾತಿ, ವರ್ಗ, ಅಂತಸ್ತನ್ನು ಸೋಕಿಸಿಕೊಳ್ಳದೆ ಇರುವವರು ಮಾತ್ರ ನಿಜ ಶರಣರು ಎಂದು ಬಣ್ಣಿಸಿದರು.

ಪಟ್ಟಭದ್ರ ಹಿತಾಸಕ್ತರು ಇರುವುದು ಬಹಳ ಕಡಿಮೆ ಜನ. ಆದರೆ ಇವರು ಸ್ಟ್ರಾಂಗ್ ಇದ್ದಾರೆ. ಆದರೆ, ಶೋಷಣೆಗೆ, ದೌರ್ಜನ್ಯಕ್ಕೆ ಒಳಗಾದವರು ಬಹುಸಂಖ್ಯಾತರು. ಇವರು ಒಗ್ಗಟ್ಟಾಗಬೇಕು ಎಂದರು.

ಬಸವಧರ್ಮ ಪೀಠದ ಪೀಠಾಧ್ಯಕ್ಷರಾದ ಶ್ರೀಮನ್ನಿರಂಜನ ಮಹಾ ಜಗದ್ಗುರು ಡಾ. ಮಾತೆಗಂಗಾದೇವಿಯವರು, ಪೀಠದ ಉಪಾಧ್ಯಕ್ಷರಾದ ಮಹದೇಶ್ವರ ಸ್ವಾಮೀಜಿ, ಕುಂಬಳಗೋಡಿನ ವಿಶ್ವಕಲ್ಯಾಣ ಮಿಷನ್ ನ ಬಸವಯೋಗಿ ಸ್ವಾಮೀಜಿ ಅವರ ದಿವ್ಯ ಸಾನಿಧ್ಯದಲ್ಲಿ ನಡೆದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹುನಗುಂದ ಶಾಸಕರಾದ ಶರಣ ವಿಜಯಾನಂದ ಕಾಶಪ್ಪನವರ್ ವಹಿಸಿದ್ದರು.

ಸಚಿವರಾದ ಬೈರತಿ ಸುರೇಶ್, ತಿಮ್ಮಾಪುರ ಅವರ ಜತೆಗೆ ಶಾಸಕರಾದ ಎಂ.ನರೇಂದ್ರ ಸ್ವಾಮಿ, ಎಚ್.ವೈ. ಮೇಠಿ, ರಾಘವೇಂದ್ರ ಹಿಟ್ನಾಳ್ ಸೇರಿ ಹಲವು ಪ್ರಮುಖರು ಉಪಸ್ಥಿತರಿದ್ದರು.

## ಜ.15 ಶ್ರೀ ಶಾಂತಲಿಂಗೇಶ್ವರ ಸಂಸ್ಥಾನ ನಗರ ಗಡ್ಡಿ ಮಠದಲ್ಲಿ ಸಂಕ್ರಾಂತಿ ವಿಶೇಷ ಪೂಜೆ

**ಹಂಪಿ ಟೈಮ್ಸ್ ಹೊಸಪೇಟೆ:**

ಕೊಪ್ಪಳ ತಾಲೂಕಿನ ಶಾಂತಲಿಂಗೇಶ್ವರ ಸಂಸ್ಥಾನ ನಗರಗಡ್ಡಿ ಮಠದಲ್ಲಿ ಮಕರ ಸಂಕ್ರಾಂತಿ ನಿಮಿತ್ತ ಜ.15 ರಂದು ಸೋಮವಾರ ಶ್ರೀ ಮಠದಲ್ಲಿ ವಿಶೇಷ ಪೂಜೆ, ರುದ್ರಾಭಿಷೇಕ ನೆರವೇರಿಸಲಾಗುತ್ತೆ. ಸಂಕ್ರಮಣದ ವಿಶೇಷ ಪೂಜೆಗೆ ಆಗಮಿಸಿದ ಸಕಲ ಸದ್ಭಕ್ತರಿಗೆ ಮಹಾಪ್ರಸಾದ ವ್ಯವಸ್ಥೆ ಕಲ್ಪಿಸಲಾಗಿದೆ. ತಾಲೂಕಿನ ನಾಗೇನಹಳ್ಳಿ ಶಾಖಾ ಶ್ರೀಮಠದ ಸದ್ಭಕ್ತರು ಹಾಗೂ ನಗರಗಡ್ಡಿ ಮಠದ ಸುತ್ತಮುತ್ತಲಿನ ಗ್ರಾಮದ ಜನರು ಸೇರಿದಂತೆ ನಾಡಿನ ವಿವಿಧೆಡೆ ಇರುವ ಭಕ್ತರು ವಿಶೇಷ ಪೂಜೆಯಲ್ಲಿ ಭಾಗವಹಿಸಬೇಕೆಂದು ಶಾಂತಲಿಂಗೇಶ್ವರ ಸಂಸ್ಥಾನ ಗಡ್ಡಿಮಠ ಕೋರಿದೆ.







